WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

# ಶ್ರೀ ಶಾರದಾ


ಮಾಸಪತ್ರಿಕೆ – 15 ಸಪ್ಟೆಂಬರ್ 2011

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-11 ಸಂಚಿಕೆ-9 ಪುಟಗಳು-10 Registered Under No.J/UDP/1260/2009-2011 Dated from 01-12-2008 to 31-12-2011.

ಶ್ರೀ ಕೃಷ್ಣಾಯನ – ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು ಪುಟ-2
ಶ್ರೀಶಾರದಾ ಮಂಟಪ, ಉಡುಪಿ : ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು ಪುಟ-3
ಮಕ್ಕಳು ಮತ್ತು ಶಿಸ್ತು – ವೈ. ಮೋಹನರಾವ್ ಪುಟ-5
ಯುರೋಪ್ ಪ್ರವಾಸ ಕಥನ – ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ ಪುಟ-7



## ಶಿಷ್ಯರ ಶ್ರೇಯಸ್ಸೇ ಗುರುಗಳ ಆಶಯ

**–ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರು**

ಶ್ರೀ ಶಂಕರ ಭಗವತ್ಪಾದರು ಹಿಂದೂ ಧರ್ಮದ ಉದ್ಧಾರಕ್ಕಾಗಿ ಚತುರಾಮ್ನಾಯ ಪೀಠವನ್ನು ಸ್ಥಾಪಿಸಿ ಸಮಾಜದ ಏಳಿಗೆಗೆ ಕಾರಣೀಭೂತರಾದರು. ಅಂತಹ ಗುರುಗಳ ಪರಂಪರೆಯಲ್ಲಿರುವ ಶೃಂಗೇರಿ ಪೀಠದಲ್ಲಿ ನಾವಿರುತ್ತಾ ಎಲ್ಲಾ ಶಿಷ್ಯ ವರ್ಗದವರ ಶ್ರೇಯಸ್ಸಿಗಾಗಿ ದೇವರಲ್ಲಿ ಸದಾ ಪ್ರಾರ್ಥಿಸುತ್ತೇವೆ. ಹಾಗೆಯೇ ಸ್ಥಾನಿಕ ಸಮಾಜವು ನಮಗೆ ತುಂಬಾ ಪ್ರೀತಿ ಪಾತ್ರವಾಗಿರುತ್ತದೆ. ಪ್ರತಿ ವರ್ಷವೂ ಸ್ಥಾನಿಕ ಬ್ರಾಹ್ಮಣ ಸಮಾಜದವರು, ಗುರುಗಳು ಎಲ್ಲಿರುತ್ತಾರೋ ಅಲ್ಲಿಗೆ ಹೋಗಿ ಅವರ ಆಶೀರ್ವಾದವನ್ನು ಪಡೆಯುತ್ತಾ ಇದ್ದೀರಿ. ಅದು ತುಂಬಾ ಸಂತೋಷದ ಸಂಗತಿ. ನಾವೇ ಅಪ್ಪಣೆ ಕೊಡಿಸಿದಂತೆ ಗಣಪತಿ ಹಬ್ಬದ ಹಿಂದಿನ ಭಾನುವಾರ ತಾವೆಲ್ಲರೂ ಒಟ್ಟಾಗಿ ಚಾತುರ್ಮಾಸ್ಯದಲ್ಲಿ ಗುರುಗಳ ಭೇಟಿಗಾಗಿ ತಪ್ಪದೇ ಬರುತ್ತಾ ಇದ್ದೀರಿ. ಅದರಂತೆಯೇ ಈ ಬಾರಿಯೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರಿದ್ದೀರಿ. ಭಗವಂತನು ನಿಮಗೆಲ್ಲರಿಗೂ ಶ್ರೇಯೋಭಿವೃದ್ಧಿಯನ್ನು ನೀಡಲಿ – ಹೀಗೆ ಶೃಂಗೇರಿ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳವರು ಚಾತುರ್ಮಾಸ್ಯ ಕಾಲದಲ್ಲಿ ಆಗಮಿಸಿದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಮಾಜ ಬಾಂಧವರಿಗೆ ಫಲಮಂತ್ರಾಕ್ಷತೆ ಇತ್ತು ಆಶೀರ್ವದಿಸಿದರು.

ತಾ.28-08-2011ರಂದು ಆದಿತ್ಯವಾರ ಗುರುಗಳ ಚಾತುರ್ಮಾಸ್ಯ ಭೇಟಿ ಸಂದರ್ಭ ಉಡುಪಿ, ಮಂಗಳೂರು, ಕುಂದಾಪುರ, ಕಾರ್ಕಳ, ಬೆಂಗಳೂರು, ಪಡುಬಿದ್ರಿ, ಪುತ್ತೂರು, ಬೆಳ್ತಂಗಡಿ, ಮೈಸೂರು, ಕಾಸರಗೋಡು, ಸುಳ್ಯ, ಪಾವಂಜೆ, ಬಂಟ್ವಾಳ ಹಾಗೂ ಬೆಂಗಳೂರಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಿದ್ದರು.

ಮೊದಲಿಗೆ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಪ್ರಸ್ತಾವನೆ ಮಾಡಿ ಕಳೆದ 26 ವರ್ಷಗಳಿಂದ ಸತತವಾಗಿ ಗುರುಗಳ ಚಾತುರ್ಮಾಸ್ಯ ಭೇಟಿಗೆ ಆಗಮಿಸುತ್ತಿರುವ ಬಗ್ಗೆ ತಿಳಿಸಿ ಎಲ್ಲರನ್ನೂ ಸ್ವಾಗತಿಸಿದರು.

ಎಲ್ಲಾ ಸಂಘ ಸಂಸ್ಥೆಗಳವರು ಹೊರೆಕಾಣಿಕೆ, ಪಾದ ಪೂಜೆ ಸಲ್ಲಿಸಿ ಗುರುಗಳ ಕೃಪೆಗೆ ಪಾತ್ರರಾದರು. ಕಳೆದ 26 ವರ್ಷಗಳಿಂದ ಸ್ಥಾನಿಕ ಬ್ರಾಹ್ಮಣ ಸಮಾಜದವರು ಕೋಟೆಕಾರು ಶ್ರೀ ಸತ್ಯಶಂಕರ ಬೊಳ್ಳಾವರ ನೇತೃತ್ವದಲ್ಲಿ ಆಗಮಿಸುತ್ತಿದ್ದು ಗುರುಗಳ ಭೇಟಿಗೆ ವರ್ಷದಿಂದ ವರ್ಷಕ್ಕೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದು ವ್ಯವಸ್ಥೆಗಾಗಿ ಸಮಾಜ ಬಾಂಧವರು ಹರ್ಷ ವ್ಯಕ್ತಪಡಿಸಿದರು.

ಅಂದು ಬೆಳಿಗ್ಗೆ 7-30 ಗಂಟೆಗೆ ಉಡುಪಿಯ ಶ್ರೀಶಾರದಾ ಮಂಟಪದಿಂದ ಸುಮಾರು 50 ಜನ ಸಮಾಜ ಬಾಂಧವರು ಎರಡು ಮಿನಿಬಸ್ಸುಗಳಲ್ಲಿ ಪ್ರಯಾಣ ಬೆಳೆಸಿದರು. ಮಧ್ಯೆದಾರಿ ಸೋಮೇಶ್ವರದಲ್ಲಿ ಲಘು ಉಪಾಹಾರ ಮುಗಿಸಿ 10-30 ಗಂಟೆಗೆ ಶೃಂಗೇರಿ ತಲುಪಿದರು. ಶೃಂಗೇರಿ ಶ್ರೀಗಳ ಭೇಟಿ ಕಾರ್ಯಕ್ರಮ ಮುಗಿಸಿ ಅಪರಾಹ್ನ 3-30 ಗಂಟೆಗೆ ಶೃಂಗೇರಿಯಿಂದ ಹೊರಟು ಸಂಜೆ 6-30ಕ್ಕೆ ಉಡುಪಿಯನ್ನು ತಲುಪಿದರು. ಚಾತುರ್ಮಾಸ್ಯ ಕಾಲದಲ್ಲಿ ಗುರುಗಳ ಭೇಟಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಸಮಾಜ ಬಾಂಧವರಿಗೂ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯು ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

## ಋಗುಪಾಕರ್ಮ ಆಚರಣೆ


ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇವರ ಆಶ್ರಯದಲ್ಲಿ ಸೌರ ಋಗುಪಾಕರ್ಮವು ತಾ.09-09-2011ರಂದು ಶಾರದಾ ಮಂಟಪದಲ್ಲಿ ವೈದಿಕರಾದ ನಾಗರಾಜ ಭಟ್ ಹಾಗೂ ರವಿ ಉಪಾಧ್ಯಾಯ ಪಾವಂಜೆ ಮತ್ತು ಕೃಷ್ಣ ಭಟ್ ಇವರ ನೇತೃತ್ವದಲ್ಲಿ ಬೆಳಿಗ್ಗೆ 9-30ರಿಂದ ಜರುಗಿತು. ಸುಮಾರು 60 ಮಂದಿ ಸಮಾಜ ಬಾಂಧವರು ಭಾಗವಹಿಸಿ ಯಜ್ಞೋಪವೀತದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪ್ರಸಾದ ಭೋಜನವನ್ನು ಸ್ವೀಕರಿಸಿದರು.

## ವರಮಹಾಲಕ್ಷ್ಮೀ ವ್ರತ ಆಚರಣೆ


ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಮಹಿಳಾ ವೇದಿಕೆಯ ವತಿಯಿಂದ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಪೂಜಾ ಧಾರ್ಮಿಕ ಕಾರ್ಯಕ್ರಮವು ತಾ.12-08-2011ರ ಶುಕ್ರವಾರ ಸಾಯಂಕಾಲ 4-30ರಿಂದ ಜರಗಿತು. ಶ್ರೀ ನಾಗಭೂಷಣ ಶಾಸ್ತ್ರಿಯವರು ನಡೆಸಿಕೊಟ್ಟ ಪೂಜಾ ಕಾರ್ಯಕ್ರಮದ ಕರ್ತೃಗಳಾಗಿ ಬ್ರಹ್ಮಾವರ ನಾರಾಯಣ ರಾವ್ ದಂಪತಿಗಳು ಭಾಗವಹಿಸಿದ್ದರು. ಹಾಗೆಯೇ ನಮ್ಮ ಸಮಾಜ ಬಾಂಧವರಲ್ಲದೆ ಅನೇಕ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.**







॥ನಮೋ ದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ಖರ ನಾಮ ಸಂವತ್ಸರದ ಕನ್ಯಾ ಮಾಸ ದಿನ ೧೯ ಸಲುವ ಅಶ್ವಯುಜ ಶುದ ೧೦ ಯು, ತಾ.06-10-2011ನೇ ಗುರುವಾರ

**ವಿಜಯದಶಮಿ ದಿನದಂದು**

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

**ಸಿ. ಎಸ್. ರಾವ್**
ಅಧ್ಯಕ್ಷರು

**ಬಿ. ಕೃಷ್ಣಮೂರ್ತಿ ರಾವ್**
ಕಾರ್ಯದರ್ಶಿ

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

ವಿ.ಸೂ. : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.
ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎಸ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಸಮಾನ ಮನಸ್ಕರು ಯಾವಾಗಲೂ ಜೊತೆಯಾಗುವುದು, ಸ್ನೇಹಿತರಾಗುವುದು ಸುಲಭ. ತಮ್ಮ ಗುಣ, ಸ್ವಭಾವ, ಇಚ್ಛೆ, ಆಸಕ್ತಿಗಳಿಂದ ಪರಸ್ಪರ ಸಮೀಪವಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಅವರು ಜೊತೆಯಾಗಿಯೇ ಚಿಂತನಶೀಲರಾಗಿ ಹೊಸ ಹೊಸ ಯೋಜನೆಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಾರೆ. ಅದರಲ್ಲಿ ಯಶಸ್ಸನ್ನೂ ಕಾಣುತ್ತಾರೆ.

ಅದೇ ಬೇರೆ ಬೇರೆ ಮನದ ವ್ಯಕ್ತಿಗಳು ಒಂದೆಡೆ ಸೇರಿದರೆ ಅವರ ಬೇರೆ ಬೇರೆ ಯೋಜನೆಗಳಿಂದ ಅವರು ಸಮೀಪಕ್ಕೆ ಬರಲು ಸಾಧ್ಯವಿಲ್ಲ. ಒಂದು ವೇಳೆ ಒಟ್ಟಾದರೂ ಅವರಲ್ಲಿ ಸಾಮರಸ್ಯ ಉಂಟಾಗದೆ ಕೇವಲ ಚರ್ಚೆಯೇ ಮುನ್ನಡೆದು ಕೊನೆಗೆ ವಿರಸದಲ್ಲಿ ಕೊನೆಗೊಳ್ಳುವುದು.

ಕಲಾವಿದರು, ಸಮಾಜ ಸಂಘಟಕರು, ಸಮಾಜ ಸೇವಕರು, ಸಂಘ ಸಂಸ್ಥೆಗಳ ಕಾರ್ಯಕರ್ತರು, ರಾಜಕಾರಣಿಗಳು.... ಹೀಗೆ ಪ್ರತಿಯೊಂದು ವಿಚಾರದಲ್ಲಿಯೂ ಆಯಾಯ ಸಮಾನ ಮನಸ್ಕರು ಜೊತೆ ಸೇರಿ ತಮ್ಮದೇ ಒಂದು ಗುಂಪು, ಸಂಸ್ಥೆ, ಸಂಘಗಳನ್ನು ರಚಿಸಿಕೊಳ್ಳುವುದನ್ನು ನಾವು ಕಾಣಬಹುದು. ಸಂಘ ಸಂಸ್ಥೆಗಳ ಹುಟ್ಟು ಉಂಟಾಗುವುದೂ ಹೀಗೆಯೇ. ಅದೇ ಸಂಘಟನೆಯಲ್ಲಿ ಅನ್ಯಮನಸ್ಕರು ಸೇರಿಕೊಂಡಲ್ಲಿ ಸಂಘದಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಸಂಘಟನೆಯು ಒಡೆದು ಹೋದ ಎಷ್ಟೋ ನಿದರ್ಶನಗಳಿವೆ.

ಒಟ್ಟಿನಲ್ಲಿ ಸಂಘಟನೆಯು ದೃಢವಾಗಬೇಕಾದರೆ ಸಂಘಟನೆಯಲ್ಲಿರುವ ಎಲ್ಲ ವ್ಯಕ್ತಿಗಳ ಮನಸ್ಸಿನಲ್ಲಿ ಏಕತಾನತೆ ಇರಬೇಕೆಂದು ತಿಳಿಯೋಣವೆ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಆಗ ರಾಮನೆಂದನು, "ಅವನು ಬೇರೆ ಯಾರಲ್ಲಾದರೂ ಮಣಿಯನ್ನು ಇಟ್ಟಿರಬೇಕು. ಊರಿಗೆ ಹೋಗಿ ಹುಡುಕಿನೋಡು. ಹೇಗೂ ನಾವು ಮಿಥಿಲೆಗೆ ಬಂದಿದ್ದೇವೆ. ಪ್ರಿಯಮಿತ್ರನಾದ ವಿದೇಹ ರಾಜನನ್ನು ನೋಡುವ ಆಸೆಯಾಗಿದೆ. ನಾನು ಅವನ ಹತ್ತಿರ ಹೋಗುತ್ತೇನೆ. ನೀನು ದ್ವಾರಕೆಗೆ ಹೋಗು." ಹೀಗೆ ಹೇಳಿದ ಬಲರಾಮನು ಮಿಥಿಲೇಶನಲ್ಲಿಗೆ ಹೋದನು. ವಿದೇಹರಾಜನು ಬಲರಾಮನನ್ನು ಬಹಳ ಗೌರವ, ಸಂಭ್ರಮಗಳಿಂದ ಸ್ವಾಗತಿಸಿದನು. ಅವನ ಗಾಢ ಪ್ರೇಮದಿಂದಾಗಿ ಬಲರಾಮನು ಮಿಥಿಲೆಯಲ್ಲಿ ಕೆಲವು ವರ್ಷಗಳನ್ನೇ ಕಳೆದನು. ಬಲದೇವನು ಮಿಥಿಲೆಯಲ್ಲಿರುವ ಸಮಾಚಾರವನ್ನು ಕೇಳಿದ ದುರ್ಯೋಧನನು ಅಲ್ಲಿಗೆ ಹೋಗಿ ಅವನಿಂದ ಗದಾಯುದ್ಧದ ಪ್ರಶಿಕ್ಷಣವನ್ನು ಪಡೆದುಕೊಂಡನು.

ಇತ್ತ ಶ್ರೀಕೃಷ್ಣನು ದ್ವಾರಕೆಗೆ ಬಂದು ಶತಧನ್ವನ ವಧೆಯನ್ನೂ, ಅವನಲ್ಲಿ ಮಣಿಯಿಲ್ಲದ್ದನ್ನು ಸತ್ಯಭಾಮೆಗೆ ತಿಳಿಸಿದನು. ಅನಂತರ ಸತ್ರಾಜಿತನಿಗೆ ಗಂಡು ಮಕ್ಕಳಿಲ್ಲದ ಕಾರಣ ತನ್ನ ಮಕ್ಕಳ ಮೂಲಕ ಅವನ ಉತ್ತರಕ್ರಿಯೆಗಳನ್ನು ನೆರವೇರಿಸಿದನು, ಶತಧನ್ವನ ವಧೆಯ ವಾರ್ತೆಯನ್ನು ಕೇಳಿದ ಅಕ್ರೂರ, ಕೃತವರ್ಮರು ತಮ್ಮ ಅಧಿಕಪ್ರಸಂಗದಿಂದ ಸತ್ರಾಜಿತನ ಕೊಲೆಯಾದುದರಿಂದ ಕೃಷ್ಣನಿಗೆ ಹೆದರಿ ದ್ವಾರಕೆಯಿಂದ ಎಲ್ಲೋ ಓಡಿ ಹೋಗಿ ತಲೆಮರೆಸಿಕೊಂಡರು. ಭಗವಂತನು ಅಕ್ರೂರನನ್ನು ಹುಡುಕಿ ಕರೆತಂದನು. ಅವನನ್ನು ಆದರದಿಂದ ಸತ್ಕರಿಸಿ ಮುಗುಳುನಗುತ್ತ ಹೇಳಿದನು, " ಚಿಕ್ಕಪ್ಪ, ಶತಧನ್ವನು ಸ್ಯಮಂತಕಮಣಿಯನ್ನು ನಿನ್ನ ಹತ್ತಿರ ಇಟ್ಟಿರುವ ವಿಚಾರ ನನಗೆ ಮೊದಲೇ ಗೊತ್ತಾಗಿತ್ತು. ಮಾವನಾದ ಸತ್ರಾಜಿತನಿಗೆ ಗಂಡು ಮಕ್ಕಳಿಲ್ಲವೆಂಬುದು ನಿನಗೆ ತಿಳಿದೇ ಇದೆ. ಆದುದರಿಂದ ಅವನ ಔರ್ಧ್ವದೈಹಿಕ ಕ್ರಿಯೆಗಳನ್ನು ಅವನ ಮಗಳ ಮಕ್ಕಳು, ಎಂದರೆ ನನ್ನ ಮಕ್ಕಳೇ ಮಾಡಿರುತ್ತಾರೆ. ಶಾಸ್ತ್ರ ಪ್ರಕಾರ ಈ ಹುಡುಗರೇ ಸತ್ರಾಜಿತನಿಗೆ ಉತ್ತರಾಧಿಕಾರಿಗಳು. ಆದುದರಿಂದ ಸ್ಯಮಂತಕ ಮಣಿಯೂ ಅವರಿಗೇ ಸೇರಬೇಕು. ಆದರೆ ಆ ಪ್ರಭಾವ ಶಾಲಿಯಾದ ಮಣಿಯನ್ನು ಇಟ್ಟುಕೊಳ್ಳಲು ನಿನ್ನಂತಹ ವ್ರತನಿಷ್ಠನೇ ಯೋಗ್ಯ. ಆದುದರಿಂದ ಅದು ನಿನ್ನ ಬಳಿಯೇ ಇರಲಿ. ಆದರೆ ನನ್ನಣ್ಣ ಆ ಮಣಿಯನ್ನು ಕಣ್ಣಿಂದ ನೋಡದೆ ನಂಬುವವನಲ್ಲ. ಆದುದರಿಂದ ಅದನ್ನು ನಮ್ಮ ಬಂಧುಗಳಿಗೆ ತೋರಿಸು. ನೀನು ನೆರವೇರಿಸಿರುವ ಸ್ವರ್ಣ ವೇದಿಕೆಯ ಯಜ್ಞಗಳು ಆ ಮಣಿಯ ಪ್ರಭಾವದಿಂದಲೇ ಸಂಪನ್ನವಾದವಲ್ಲವೇ?" ಭಗವಂತನ ಈ ಮಾತುಗಳನ್ನು ಕೇಳಿ ಆಶ್ವಸ್ತನಾದ ಅಕ್ರೂರನು ತನ್ನ ಬಟ್ಟೆಯಲ್ಲಿ ಭದ್ರವಾಗಿ ಬಚ್ಚಿಟ್ಟಿದ್ದ ಸ್ಯಮಂತಕ ಮಣಿಯನ್ನು ಅವನಿಗೇ ಅರ್ಪಿಸಿದನು. ಮುಕುಂದನು ಅದನ್ನು ತನ್ನೆಲ್ಲ ಬಂಧುಗಳಿಗೆ ತೋರಿಸಿ ತನ್ನ ಮೇಲೆ ಬಂದ ಅಪವಾದವನ್ನು ನಿವಾರಿಸಿಕೊಂಡು ಅದನ್ನು ಪುನಃ ಶ್ವಫಲ್ಕನ ಮಗನಿಗೇ (ಅಕ್ರೂರನಿಗೇ) ಕೊಟ್ಟನು.

### ೧೭

ಅರಗಿನ ಮನೆಯಿಂದ ತಪ್ಪಿಸಿಕೊಂಡು ಹೋದ ಪಾಂಡವರು ಅಲ್ಲಲ್ಲಿ ಅಲೆದು ಕೊನೆಗೆ ಪಾಂಚಾಲ ದೇಶಕ್ಕೆ ಹೋದರು. ಅಲ್ಲಿ ದ್ರುಪದನು ತನ್ನ ಮಗಳಾದ ಕೃಷ್ಣೆ(ದ್ರೌಪದಿ)ಯ ಸ್ವಯಂವರವನ್ನು ಏರ್ಪಡಿಸಿದ್ದನು. ಬ್ರಾಹ್ಮಣರ ವೇಷದಲ್ಲಿದ್ದ ಪಾಂಡವರೂ ಸ್ವಯಂವರಕ್ಕೆ ಹೋಗಿದ್ದರು. ಅಲ್ಲಿ ಮತ್ಸ್ಯಯಂತ್ರವನ್ನು ಭೇದಿಸಿ ಅರ್ಜುನನು ದ್ರೌಪದಿಯನ್ನು ಪತ್ನಿಯನ್ನಾಗಿ ಪಡೆದನು. ಪಾಂಡವರು ಬದುಕಿರುವ ವಿಚಾರವನ್ನು ತಿಳಿದ ಧೃತರಾಷ್ಟ್ರನು ಅವರನ್ನು ಊರಿಗೆ ಕರೆಯಿಸಿ ಇಂದ್ರಪ್ರಸ್ಥದಲ್ಲಿರಲು ವ್ಯವಸ್ಥೆ ಕಲ್ಪಿಸಿದನು. ಪಾಂಡವರು ಅಲ್ಲಿ ನೆಲೆ ನಿಂತರು.

ಒಮ್ಮೆ ಶ್ರೀ ಕೃಷ್ಣನು ಪಾಂಡವರನ್ನು ಕಾಣಲು ಬಯಸಿ ಯುಯುಧಾನ (ಸಾತ್ಯಕಿ) ಮೊದಲಾದವರರೊಡಗೂಡಿ ಇಂದ್ರಪ್ರಸ್ಥಕ್ಕೆ ಪ್ರಯಾಣ ಮಾಡಿದನು. ತಮ್ಮಲ್ಲಿಗೆ ಬಂದಂತಹ ವಾಸುದೇವನನ್ನು ನೋಡುತ್ತಲೇ ಪಾಂಡು ಪುತ್ರರು ಒಟ್ಟಿಗೆ ಎದ್ದು ನಿಂತರು. ಅವರಿಗೆ ಮುಖ್ಯವಾದ ಪ್ರಾಣವೇ ಬಂದಂತಾಯಿತು. ಒಬ್ಬೊಬ್ಬರಾಗಿ ಎಲ್ಲರೂ ಭಗವಂತನನ್ನು ಅಪ್ಪಿಕೊಂಡರು. ಅವನ ಮುಗುಳು ನಗೆಯ ಸುಂದರ ಮುಖವನ್ನು ನೋಡಿ ಎಲ್ಲರೂ ಇನ್ನಿಲ್ಲದ ಸಂತೋಷವನ್ನನುಭವಿಸಿದರು. ಶ್ರೀಕೃಷ್ಣನು ತನಗಿಂತ ಹಿರಿಯರಾದ ಯುಧಿಷ್ಠಿರ, ಭೀಮರಿಗೆ ಪಾದಾಭಿವಂದನೆ ಮಾಡಿದನು. ಸಮವಯಸ್ಕನಾದ ಅರ್ಜುನನ್ನು ಆಲಿಂಗಿಸಿದರು. ಕಿರಿಯರಾದ ನಕುಲ, ಸಹದೇವರು ಸೋದರ ಭಾವನಾದ ಕೃಷ್ಣನಿಗೆ ಅಭಿವಾದಿಸಿದರು. ಪಾಂಡವರು ದೇವಕೀ ನಂದನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಸಮ್ಮಾನಿಸಿದರು. ಆಗ ನೂತನ ವಧುವಾದ ದ್ರೌಪದಿಯು ನಾಚುತ್ತಾ ನಿಧಾನವಾಗಿ ಬಂದು ಕೃಷ್ಣನಿಗೆ ನಮಿಸಿದಳು. ಕೃಷ್ಣನ ಜೊತೆಯಲ್ಲಿ ಬಂದ ಸಾತ್ಯಕಿಯನ್ನೂ ಪಾಂಡವರು ಯಥೋಚಿತ ಸತ್ಕರಿಸಿದರು. ಹಾಗೇ ಇತರ ಯದು ಶ್ರೇಷ್ಠರನ್ನೂ ಉಪಚರಿಸಿದರು. ಅನಂತರ ಶ್ರೀಕೃಷ್ಣನು ತನ್ನ ಸೋದರತ್ತೆಯಾದ ಕುಂತಿಯಲ್ಲಿಗೆ ಹೋಗಿ ಅಭಿವಾದನೆ ಮಾಡಿದನು. ಅವಳು ಸ್ನೇಹಾರ್ದ್ರವಾದ ಕಣ್ಣುಗಳಿಂದಲೇ ಅವನನ್ನು ತಬ್ಬಿಕೊಂಡಳು. ಶ್ರೀಕೃಷ್ಣನು ಅವಳ ಯೋಗಕ್ಷೇಮವನ್ನು ವಿಚಾರಿಸಿದನು. ಆಗ ಕುಂತಿಯು ಪ್ರೇಮದಿಂದ ಗಂಟಲು ಕಟ್ಟಿದವಳಾಗಿ, ಕಣ್ಣೀರು ಹನಿಸುತ್ತ ತನ್ನ ಸೋದರಳಿಯನನ್ನು ಮಾತನಾಡಿಸಿದಳು, "ಕೃಷ್ಣ, ಯಾವಾಗ ನೀನು ನಮ್ಮನ್ನು ಆತ್ಮೀಯರೆಂದು ತಿಳಿದುಕೊಂಡು ಸೋದರನಾದ ಅಕ್ರೂರನನ್ನು ಇಲ್ಲಿಗೆ ಕಳುಹಿಸಿಕೊಟ್ಟೆಯೋ ಅನಾಥರಾಗಿದ್ದ ನಾವು ಆಗಲೇ ಸನಾಥರಾದೆವು. ಜಗತ್ತಿಗೇ ಸುಹೃದನಾದ ನಿನಗೆ ತನ್ನವರು, ಪರರು ಎಂಬ ಭೇದಭಾವವಿಲ್ಲ. ಆದರೂ ಯಾರು ನಿನ್ನನ್ನು ಸ್ಮರಿಸುತ್ತಾರೋ ಅವರ ಹೃದಯದಲ್ಲಿದ್ದು ಅವರ ಕಷ್ಟಗಳನ್ನು ಪರಿಹರಿಸುತ್ತೀ?"

ಯುಧಿಷ್ಠಿರನೆಂದನು, "ಭಗವಂತ, ನಾವು ಏನು ಮಾಡಿದ್ದೇವೋ ನಮಗೆ ತಿಳಿಯದು. ಯೋಗೇಶ್ವರರಿಗೂ ದುರ್ಲಭನಾದ ನೀನು ನಮ್ಮಂತಹ ಅಲ್ಪಮೇಧರಿಗೆ ಸುಲಭವಾಗಿ ಕಾಣಿಸಿಕೊಂಡಿದ್ದಿ. ದಯೆ ಮಾಡಿ ನಮ್ಮಲ್ಲೇ ಸ್ವಲ್ಪ ಕಾಲ ಇರಬೇಕು". ಹೀಗೆ ಯುಧಿಷ್ಠಿರನ ಪ್ರಾರ್ಥನೆಯಂತೆ ಶ್ರೀಕೃಷ್ಣನು ಮಳೆಗಾಲದ ನಾಲ್ಕು ತಿಂಗಳುಗಳನ್ನು ಇಂದ್ರಪ್ರಸ್ಥದಲ್ಲೇ ಕಳೆದನು. ಇಂದ್ರಪ್ರಸ್ಥದ ಪ್ರಜೆಗಳಿಗೂ ಶ್ಯಾಮಸುಂದರನನ್ನು ಎಷ್ಟು ನೋಡಿದರೂ ತೃಪ್ತಿಯಾಗಲಿಲ್ಲ.

ಒಂದು ದಿನ ಅರ್ಜುನನು ತನ್ನ ವಾನರ ಧ್ವಜದ ರಥದಲ್ಲಿ, ಕೇಶವನನ್ನು ಕುಳ್ಳಿರಿಸಿಕೊಂಡು ಬಂದು ಭಯಂಕರ ಕಾಡಿಗೆ ಭೇಟಿಯಾಡಲು ಹೋದನು. ಅಲ್ಲಿ ಹುಲಿ, ಹಂದಿ, ಕೋಣ, ಖಡ್ಗಮೃಗ ಮೊದಲಾದ ಮೃಗಗಳನ್ನು ಕೊಂದನು. ಸೇವಕರು ಯಜ್ಞಯೋಗ್ಯವಾದ ವಸ್ತುಗಳನ್ನು ಸಂಗ್ರಹಿಸಿ ತೆಗೆದುಕೊಂಡು ಹೋಗಿ ಯುಧಿಷ್ಠಿರನಿಗೆ ಕೊಟ್ಟರು. ಕೃಷ್ಣಾರ್ಜುನರು ಬಾಯಾರಿ ಯಮುನಾ ನದಿಗೆ ಹೋದರು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

ಮುಖಂ ಪ್ರಸನ್ನಂ ವಿಮಲಾ ಚ ದೃಷ್ಟಿ
ಸ್ತಥಾನುರಾಗೋ ಮಧುರಾ ಚ ವಾಣಿ ।
ಸ್ನೇಹೋऽಧಿಕಸ್ಸಂಭ್ರಮ ದರ್ಶನಂ ಚ
ಸದಾನುರಕ್ತಸ್ಯ ಜನಸ್ಯ ಲಕ್ಷಣಂ ॥

ಅಂದರೆ ಮುಖ ಪ್ರಸನ್ನತೆಯು, ಪ್ರಸನ್ನ ದೃಷ್ಟಿಯು, ಅನುರಾಗವು, ಮಧುರವಚನವು, ಅಧಿಕ ಸ್ನೇಹವು, ಸಂಭ್ರಮದೊಡನೆ ನೋಡುವುದು, ಇವೆಲ್ಲವೂ ಪ್ರೀತಿಯುಳ್ಳ ಜನರ ಲಕ್ಷಣಗಳು.

**ಪುಸ್ತಕ ಪರಿಚಯ :**

**ಭಾವ ತರಂಗ**

*ಲೇಖಕರು :* ಡಾ। ನಾಗಭೂಷಣ ಮೂಲ್ಕಿ
*ಪ್ರಕಾಶನ :* ಅನುಷ-ಅಂಕುಶ ಪ್ರಕಾಶನ
ವೆಸ್ಟ್‌ಮೌಂಟ್, ಇಲಿನಾಯ್, ಯು.ಎಸ್.ಎ.
*ಮುದ್ರಣ :* ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು.
*ಬೆಲೆ :* ಅರವತ್ತು ರೂಪಾಯಿಗಳು (ಹತ್ತು ಡಾಲರು)

'ಭಾವ ತರಂಗ' ಕೃತಿಯ ಲೇಖಕರಾದ ಡಾ। ನಾಗಭೂಷಣ ಮೂಲ್ಕಿ ಇವರು ಕೃತಿಯ ಮುನ್ನುಡಿಯಲ್ಲಿ ತಿಳಿಸಿದಂತೆ-"ಪದವಿಪೂರ್ವ ವ್ಯಾಸಂಗ ಮಾಡುತ್ತಿದ್ದಾಗ ನಾನೇನಾದರೂ ಮಾಡಬೇಕೆಂಬ ಛಲ ಹುಟ್ಟಿತು. ನಾನು ನನ್ನ ತರಗತಿಯಲ್ಲಿ ಎತ್ತರದಲ್ಲಿ ಅತೀ ಚಿಕ್ಕವನಾಗಿದ್ದೆ. ನನ್ನ ಇರುವಿನ ಅರಿವು ಯಾರಿಗೂ ಇದ್ದಂತಿಲ್ಲ. ಯಾರೂ ನನ್ನೊಡನಾಟಕ್ಕೆ ಇಚ್ಛಿಸುತ್ತಿರುತ್ತಿರಲಿಲ್ಲ. ಕಲೆಗೆ ತಲೆದೂಗದವರು ಕಮ್ಮಿಯೇ. ಅರ್ಥವಾಗದಿದ್ದರೂ ತಮ್ಮ ಸ್ವಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲಿಕ್ಕಾಗಿ ಯಾದರೂ ಅರ್ಥವಾದಂತೆ, ಅಭಿರುಚಿಯಿರುವಂತೆ ನಟಿಸುವವರು ಇರುತ್ತಾರೆ. ನನಗೂ ಒಂದು ಕಲೆಯಲ್ಲಿ ನನ್ನನ್ನು ತೊಡಗಿಸಿಕೊಳ್ಳಬೇಕೆನಿಸಿತು....

ಏಕೆ ಕವಿಯಾಗಬಾರದು. ಕವಿತೆಗಳನ್ನು ಬರೆಯಲು ಒಂದು ವಿಷಯವಿದ್ದರಾಯಿತು. ಪ್ರಾರಂಭದ ಮೊದಲ ಎರಡು ಗೆರೆಗಳು ಮತ್ತು ಅಂತ್ಯದ ಎರಡು ಗೆರೆಗಳು ಚೆನ್ನಾಗಿ ಬಂದರಾಯಿತು. ಹಾಗೆ ಒಂದೆಡೆ ಕುಳಿತು ಯೋಚಿಸಿದೆ. ಯೋಚಿಸಿದರೆ ಬರಬೇಕಲ್ಲ... ಹೀಗೆ ಒಂದು ತಿಂಗಳು ಕಳೆಯಿತು. ಮತ್ತೆ ನಿಧಾನವಾಗಿ ಪದಗಳು ಚಿತ್ರವಿಚಿತ್ರವಾಗಿ ಜೋಡಿಸಿ ಬರೆದೆ. ಅದು ಕವಿತೆಯೋ ಕವನವೋ ಗೊತ್ತಿಲ್ಲ. ಆದರೆ ಮಹಾಕಾವ್ಯವಂತೂ ಅಲ್ಲ ಅನಿಸಿತು. ಕಾಲೇಜಿನಲ್ಲಿ ವಾಲ್ ಮಾಗಜೀನ್ ಇತ್ತು. ಅಲ್ಲಿಯ ಮೇಲ್ವಿಚಾರಕನ ಹತ್ತಿರ ಕೊಟ್ಟೆ......

ನನ್ನ ಕವನದ ಪ್ರಭಾವದಿಂದ ನಾನು ಕನ್ನಡ ಸಂಘದ ಜೊತೆಕಾರ್ಯದರ್ಶಿಯಾದೆ. ಇಲ್ಲಿಯೂ ರಾಜಕೀಯ. ನಮ್ಮ ಕನ್ನಡ ಪ್ರಾಧ್ಯಾಪಕರು ಬೇರೊಬ್ಬನನ್ನು ಕಾರ್ಯದರ್ಶಿಯಾಗಿ ನಿಲ್ಲಿಸಿದ್ದರು. ನನ್ನ ಸಂಬಂಧಿತ ಪ್ರಾಧ್ಯಾಪಕರು (ಗಣಿತ) ಅದಕ್ಕೆಲ್ಲಾ ಜಗಳಾಟ ಹೊಡೆದಾಟ ಬೇಡ ಜೊತೆ ಕಾರ್ಯದರ್ಶಿಯಾಗಿರು ಎಂದರು. ಅವರ ಮಾತಿಗೆ ಬೆಲೆ ಕೊಟ್ಟು ಸಂಧಾನ ಮಾಡಿಕೊಂಡೆ....

ಬಿ.ಎಸ್ಸಿ.ಯಲ್ಲಿಯೂ ನನ್ನ ಕವನ ಪ್ರವಾಹ ಹರಿಯುತ್ತಿತ್ತು. ಎಷ್ಟು ಮಂದಿ ಕೊಚ್ಚಿ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಅಲ್ಲ ಮುಂಜಾಗರೂಕತನ ವಹಿಸಿದರೋ ಏನೋ; ಅಲ್ಲಿ ಇದು ಸರ್ವೇ ಸಾಮಾನ್ಯ ಅಂದುಕೊಂಡಿರಬೇಕು.

ಎಂ.ಎಸ್ಸಿ ಮಾಡುವಾಗ ಕೆಲವು ಕವನಗಳನ್ನು ಬರೆದೆ. ನಮ್ಮ ತಂದೆ ಬರೆಯಬೇಡ ಎಂದು ಹೇಳಲಿಲ್ಲ. ಸದ್ಯಕ್ಕೆ ಅಷ್ಟೇ ಸಮಾಧಾನ. 'ಪ್ರೇಮ' ಎಂಬ ಕವನಕ್ಕೆ ಪ್ರಥಮ ಬಹುಮಾನ ಬಂತು....

ಜಿಲ್ಲಾ ಮಟ್ಟದ ಕವಿಗೋಷ್ಠಿಗೂ ಹೋದೆ...

ಕೆಲಸದ ಪ್ರಯುಕ್ತ ಬಾಂಬೆಗೆ ಹೋದೆ. ಆಶ್ಚರ್ಯವೆಂದರೆ ನನ್ನ ಕವನದ ಬಗ್ಗೆ ನನಗೆ ಮರೆತೇ ಹೋಯಿತು....

ಚಿಕಾಗೋಕ್ಕೆ ಕೆಲಸದ ಪ್ರಯುಕ್ತ ಬಂದೆ. ಕನ್ನಡ ಕೂಟಕ್ಕೆ ಒಂದೆರಡು ಸಾರಿ ಹೋದೆ.....

ಈ ವರ್ಷ ಮೋಕ್ಷಗುಂಡಂ ಜಯರಾಮ್ ಅವರು ನನ್ನ ಕವನ ಸಂಕಲನವನ್ನು ಚಿಕಾಗೋದಲ್ಲಿ ನಡೆಯುವ ವಿಶ್ವಕನ್ನಡ ಸಮ್ಮೇಳನದಲ್ಲಿ ಬಿಡುಗಡೆ ಮಾಡಬಹುದೆಂದು ಸೂಚಿಸಿದ್ದರು...

ಓದಿ ಆನಂದಿಸಿ ಈ ನನ್ನ ಕವನ, ಕವಿತೆ, ಕಾವ್ಯ... ಹೇಗೆ ಬೇಕೋ ಹಾಗೆ ಕರೆಯಿರಿ"

ಈ ಕೃತಿಯಲ್ಲಿ 56 ಕವನಗಳಿವೆ. "ಹೇಳು ಕೇಳುವೆ ಹೇಳು" ಕವನದ ಕೆಲವು ಸಾಲುಗಳು : ಕೊರಗುವೇತಕೆ ಕೇಳು, ಕರಗುತಿದೆ ಬಾಳು, ಏಳು ಎಚ್ಚೆತ್ತೇಳು, ದೈವ ಸಂಭೂತನೇ ಏಳು, ....

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ.



# ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ ।
ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.28-09-2011ರಿಂದ 05-10-2011ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ

- ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

ತಾ.06-10-2011ನೇ ಗುರುವಾರ ಪೂರ್ವಾಹ್ನ ಗಂಟೆ 9.00 ರಿಂದ ಸಂಜೆ 2.00 ಗಂಟೆಯ ವರೆಗೆ ನಮ್ಮ ಸಮಾಜ ಬಾಂಧವರಿಗಾಗಿ

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| | 1 | 2 | 3 | |
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | 8ನೇ ತರಗತಿಯಿಂದ ಪದವಿಪೂರ್ವ ತರಗತಿ | (4 ನಿಮಿಷ) |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-7ನೇ ತರಗತಿಯವರೆಗೆ (ಯಾವುದೇ ದೃಶ್ಯ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯ ವಿದ್ಯಾರ್ಥಿಗಳು ಜಗದ್ಗುರು ಶ್ರೀ ಶಂಕರಾಚಾರ್ಯರ ಚಿತ್ರ | (90 ನಿಮಿಷ) |
| **ರಂಗವಲ್ಲಿ** | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ) | 8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ | (90 ನಿಮಿಷ) |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ (ಕಂಠಪಾಠ ಸ್ಪರ್ಧೆಯ ಶ್ಲೋಕಗಳನ್ನು ಕೆಳಗೆ ನೀಡಲಾಗಿದೆ. ಈ ಶ್ಲೋಕಗಳಲ್ಲಿ ನಿರ್ಣಾಯಕರು ಕೇಳುವ ಶ್ಲೋಕಗಳನ್ನು ಹೇಳಬೇಕು) | | 8ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ | |
| **ಛದ್ಮವೇಷ** (ಏಕವ್ಯಕ್ತಿ) ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8-10ನೇ ತರಗತಿಯವರೆಗೆ | (4 ನಿಮಿಷ) |
| **ಹೂ ಜೋಡಿಸುವುದು** (ಮುಕ್ತ ಅವಕಾಶ) | (ಬೆಳಿಗ್ಗೆ 10.30 ರಿಂದ ಪ್ರಾರಂಭ) ಹೂಗಳನ್ನು ಸ್ಪರ್ಧಿಗಳೇ ತರಬೇಕು. | | | (30 ನಿಮಿಷ) |
| **ಚೂರ್ಣಿಕೆ ಹೇಳುವುದು** | ಎಲ್ಲಾ ವಯಸ್ಸಿನವರಿಗೂ ಮುಕ್ತ ಅವಕಾಶ. | | ಮಧ್ಯಾಹ್ನ ಊಟ ನಡೆಯುತ್ತಿರುವಾಗ ಚೂರ್ಣಿಕೆ ಹೇಳುವುದು | |

ವಿಶೇಷ ಸೂಚನೆಗಳು : 1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. 2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು. 3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು. 4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು. 5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.
**6) ಶ್ರೀಶಾರದಾ ದೇವಿಗೆ ಹರಕೆಯ ರೂಪದಲ್ಲಿ ಬಂದ ಸೀರೆಗಳನ್ನು ಅಪರಾಹ್ನ ಏಲಂ ಮಾಡಲಾಗುವುದು.**

***ಅದೇ ದಿನ ಆದರ್ಶ ಆಸ್ಪತ್ರೆ, ಉಡುಪಿ ಮತ್ತು ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.), ಎಲ್ಲೂರು ಹಾಗೂ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇವರ ಸಹಯೋಗದೊಂದಿಗೆ ನುರಿತ ವೈದ್ಯರಿಂದ ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನದವರೆಗೆ ಉಚಿತ ವೈದ್ಯಕೀಯ ತಪಾಸಣೆ ನಡೆಸಲಾಗುವುದು. (ಮಧುಮೇಹ, ಇಸಿಜಿ, ರಕ್ತದೊತ್ತಡ, ಕೊಲೆಸ್ಟ್ರಾಲ್ ತಪಾಸಣೆ ಇತ್ಯಾದಿ)***

**ಶ್ರೀಶಾರದಾ ಹವ್ಯಾಸಿ ಯಕ್ಷಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ ''ಮಾಯಾಪುರಿ ಮಹಾತ್ಮೆ-ವೀರಮಣಿ ಕಾಳಗ'' ಸಮಯ: ಸಂಜೆ 6-00ರಿಂದ 9-00**

**ಈ ಕಾರ್ಯಕ್ರಮದ ಪ್ರಾಯೋಜಕರು : ಡಾ। ವೈ. ಸುದರ್ಶನ್ ರಾವ್, ಕುಕ್ಕಿಕಟ್ಟೆ**

ಕಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-7ನೇ ತರಗತಿ ವರೆಗೆ

## ಶ್ರೀ ಅನ್ನಪೂರ್ಣಾ ಸ್ತೋತ್ರಂ (ಶ್ರೀ ಶಂಕರಾಚಾರ್ಯ ಕೃತ)

ನಿತ್ಯಾನಂದಕರೀ ವರಾಭಯಕರೀ ಸೌಂದರ್ಯರತ್ನಾಕರೀ
ನಿರ್ಧೂತಾಖಿಲಘೋರಪಾವನಕರೀ ಪ್ರತ್ಯಕ್ಷಮಾಹೇಶ್ವರೀ ।
ಪ್ರಾಲೇಯಾಚಲವಂಶಪಾವನಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೧ ॥

ನಾನಾ ರತ್ನ ವಿಚಿತ್ರಭೂಷಣಕರೀ ಹೇಮಾಂಬರಾಡಂಬರೀ
ಮುಕ್ತಾಹಾರ ವಿಡಂಬಮಾನವಿಲಸದ್ವಕ್ಷೋಜಕುಂಭಾಂತರೀ ।
ಕಾಶ್ಮೀರಾಗರುವಾಸಿತಾ ರುಚಿಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೨ ॥

ಯೊಗಾನಂದಕರೀ ರಿಪುಕ್ಷಯಕರೀ ಧರ್ಮಾರ್ಥನಿಷ್ಠಾಕರೀ
ಚಂದ್ರಾರ್ಕಾನಲಭಾಸಮಾನಲಹರೀ ತ್ರೈಲೋಕ್ಯರಕ್ಷಾಕರೀ ।
ಸರ್ವೈಶ್ವರ್ಯಸಮಸ್ತವಾಂಛಿತಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೩ ॥

ಕೈಲಾಸಾಚಲಕಂದರಾಲಯಕರೀ ಗೌರೀ ಉಮಾ ಶಾಂಕರೀ
ಕೌಮಾರೀ ನಿಗಮಾರ್ಥ ಗೋಚರಕರೀ ಓಂಕಾರ ಬೀಜಾಕ್ಷರಿ ।
ಮೋಕ್ಷದ್ವಾರಕವಾಟಪಾಟನಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೪ ॥

ದೃಶ್ಯಾದೃಶ್ಯಪ್ರಭೂತವಾಹನಕರೀ ಬ್ರಹ್ಮಾಂಡಭಾಂಡೋದರೀ
ಲೀಲಾನಾಟಕಸೂತ್ರಭೇದನಕರೀ ವಿಜ್ಞಾನದೀಪಾಂಕುರೀ ।
ಶ್ರೀ ವಿಶ್ವೇಶಮನಃಪ್ರಸಾದನಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೫ ॥

ಉರ್ವೀ ಸರ್ವಜನೇಶ್ವರೀ ಭಗವತೀ ಮಾತಾನ್ನಪೂರ್ಣೇಶ್ವರೀ
ವೇಣೀನೀಲಸಮಾನಕುಂತಲಧರೀ ನಿತ್ಯಾನ್ನದಾನೇಶ್ವರೀ ।
ಸರ್ವಾನಂದಕರೀ ದಶಾಶುಭಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೬ ॥

ಹಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ

## ಶ್ರೀ ಸುಬ್ರಹ್ಮಣ್ಯಷಟ್ಕ ಸ್ತೋತ್ರಂ

ಶರಣಾಗತಮಾತುರಮಾಧಿಜಿತಂ ಕರುಣಾಕರ ಕಾಮದ ಕಾಮಹತಂ ॥
ಶರಕಾನನಸಂಭವ ಚಾರುರುಚೇ ಪರಿಪಾಲಯ ತಾರಕಮಾರಕ ಮಾಂ ॥ ೧ ॥

ಹರಸಾರಸಮುದ್ಭವ ಹೈಮವತೀ ಕರಪಲ್ಲವಲಾಲಿತ ಕಮ್ರತನೋ ॥
ಮುರವೈರಿವಿರಿಂಚಿಮುದಂಬುನಿಧೇ ಪರಿಪಾಲಯ ತಾರಕಮಾರಕ ಮಾಂ ॥ ೨ ॥

ಗಿರಿಜಾಸುತ ಸಾಯಕಭಿನ್ನಗಿರೇ ಸುರಸಿಂಧುತನೂಜ ಸುವರ್ಣರುಚೇ ॥
ಶಿಖಿಜಾತ ಶಿಖಾವಲವಾಹನ ಹೇ ಪರಿಪಾಲಯ ತಾರಕಮಾರಕ ಮಾಂ ॥ ೩ ॥

ಜಯ ವಿಪ್ರಜನಪ್ರಿಯ ವೀರ ನಮೋ ಜಯ ಭಕ್ತಜನಪ್ರಿಯ ಭದ್ರ ನಮೋ ॥
ಜಯ ದೇವ ವಿಶಾಖ ಕುಮಾರ ನಮಃ ಪರಿಪಾಲಯ ತಾರಕಮಾರಕ ಮಾಂ ॥ ೪ ॥

ಪುರತೋ ಭವ ಮೇ ಪರಿತೋ ಭವ ಮೇ ಪಥಿ ಮೇ ಭಗವಾನ್ ಭವ ರಕ್ಷಗತಂ ।
ವಿತರಾಜಿಷು ಮೇ ವಿಜಯಂ ಭಗವನ್ ಪರಿಪಾಲಯ ತಾರಕಮಾರಕ ಮಾಂ ॥ ೫ ॥

ಶರದಿಂದುಸಮಾನ ಷಡಾನನಯಾ ಸರಸೀರುಹ ಚಾರುವಿಲೋಚನಯಾ ॥
ನಿರುಪಾಧಿಕಯಾ ನಿಜಬಾಲಜಯಾ ಪರಿಪಾಲಯ ತಾರಕಮಾರಕ ಮಾಂ ॥ ೬ ॥

ಇತಿ ಕುಕ್ಕುಟಕೇತುಮನುಸ್ಮರತಾಂ ಪಠತಾಮಪಿ ಷಣ್ಮುಖಷಟ್ಕಮಿದಂ ॥
ನಮತಾಪಿ ನಂದನಮಿಂದುಭೃತೋ ನ ಭಯಂ ಕ್ವಚಿದಸ್ತಿ ಶರೀರಭೃತಾಂ ॥ ೭ ॥

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.**

**ವಿದ್ಯಾರ್ಥಿವೇತನ ಹಣ ಪಡೆಯಲು ಮಾಹಿತಿ**

ವಿದ್ಯಾರ್ಥಿವೇತನಕ್ಕಾಗಿ ಸಲ್ಲಿಸಿದವರ ಅರ್ಜಿ ಪರಿಶೀಲನೆಯಲ್ಲಿದೆ. ಮಂಜೂರಾದರೆ ಹಣವನ್ನು ಬ್ಯಾಂಕ್ NEFT ಮೂಲಕ ಕಳುಹಿಸುವ ಚಿಂತನೆಯಿದೆ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಗಳ/ಪೋಷಕರ ಬ್ಯಾಂಕ್ ಅಕೌಂಟ್ (ಸದ್ಯ ಇಲ್ಲವಾದರೆ ಈಗ ಮಾಡಿಸಿರಿ) ವಿವರಗಳನ್ನು ತಿಳಿಸಿರಿ.

1. ಬ್ಯಾಂಕ್ ಖಾತೆಯ ಹೆಸರು, ವಿಳಾಸ.
2. ಖಾತೆಯ ವಿವರ (ಎಸ್.ಬಿ. ಇತ್ಯಾದಿ) ಹಾಗೂ ಪೂರ್ಣ ನಂಬರ್.
3. ಬ್ಯಾಂಕಿನ IFSC ಕೋಡ್ ನಂಬರ್. ಇದು ಪಾಸ್ ಪುಸ್ತಕ/ಚೆಕ್‌ನಲ್ಲಿ ಬರೆದಿರುತ್ತಾರೆ. ಇಲ್ಲವಾದರೆ ಬ್ಯಾಂಕ್ ಶಾಖೆಯವರು ಬರೆದುಕೊಡುತ್ತಾರೆ. (ಪಾಸ್ ಪುಸ್ತಕದಲ್ಲಿ)

**(ಮೇಲಿನ ಮೂರು ವಿವರಗಳನ್ನು ಒಳಗೊಂಡ ಖಾತೆಯ ಪಾಸ್‌ಪುಸ್ತಕದ ಪುಟದ ಜೆರಾಕ್ಸ್ ಪ್ರತಿ ಕಳುಹಿಸಿರಿ)**

ಈ ವಿವರಗಳನ್ನು ಸಂಗ್ರಹಿಸಿ ವಿದ್ಯಾರ್ಥಿ ವೇತನ ಮಂಜೂರಾದಾಗ ನೇರ ಬ್ಯಾಂಕ್ ಖಾತೆಗೆ ಹಣವನ್ನು ಜಮೆ ಮಾಡಲು ಪ್ರಯತ್ನಿಸಲಾಗುವುದು.

**-ಅಧ್ಯಕ್ಷರು, ವಿದ್ಯಾರ್ಥಿ ವೇತನ ಮತ್ತು ಶಿಕ್ಷಣ ತರಬೇತಿ ವೇದಿಕೆ,**

# ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ಚರ್ಚ್ ರಸ್ತೆ, ಮಂಗಳೂರು





ಚಿತ್ರ : ರಘುವೀರ, ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ಚರ್ಚು ರಸ್ತೆ, ಮಂಗಳೂರು ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ತಾ.4-9-2011ರ ಆದಿತ್ಯವಾರದಂದು ಆಚರಿಸಲಾಯಿತು. ಬೆಳಿಗ್ಗೆ ವಿಷ್ಣು ಸಹಸ್ರನಾಮ ಪಾರಾಯಣದೊಂದಿಗೆ ಆರಂಭವಾದ ಕಾರ್ಯಕ್ರಮ ಮುದ್ದು ಕೃಷ್ಣ ಸ್ಪರ್ಧೆ, ಭಗವದ್ಗೀತೆ ಕಂಠಪಾಠ ಸ್ಪರ್ಧೆ, ಭಕ್ತಿಗೀತೆ ಸ್ಪರ್ಧೆ, ಚಕ್ಕುಲಿ ಮತ್ತು ಉಂಡೆ ಸಂಖ್ಯಾ ಊಹನೆ ಮಾಡುವ ಸ್ಪರ್ಧೆಗಳು ನಡೆದವು. ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆ, ಪುಟಾಣಿಗಳಿಂದ ನೃತ್ಯ, ಭರತನಾಟ್ಯ, ಮಹಿಳೆಯರಿಂದ ಸಮೂಹ ಗಾನ, ಸಮೂಹ ನೃತ್ಯ ಹಾಗೂ ಪುರುಷರಿಂದ ಸಮೂಹ ನೃತ್ಯಗಳು ನಡೆದವು. ಕೊನೆಯಲ್ಲಿ ಮೊಸರು ಕುಡಿಕೆಯನ್ನು ಒಡೆಯಲಾಯಿತು. ಶ್ರೀಮತಿ ಅರುಣಾ ಸೋಮಶೇಖರ್ ಮತ್ತು ಶ್ರೀ ಪಿ.ಶ್ರೀಕಾಂತ್ ರಾವ್ ಕಾರ್ಯಕ್ರಮ ಸಂಯೋಜಿಸಿದರು. ಶ್ರೀಯುತ ನಾಗರಾಜ್ ವರ್ಕಾಡಿ ಕಾರ್ಯಕ್ರಮ ನಿರ್ವಹಿಸಿದರು. ಬಹುಮಾನ ವಿತರಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ : **ಶ್ರೀ ಪಿ. ಶ್ರೀಕಾಂತ ರಾವ್**

# ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಬಾಲಾಲಯದಲ್ಲಿ ಶ್ರೀ ಸಾಸ್ತಾರ ದೇವರ ಪ್ರತಿಷ್ಠೆ



ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ಟೆಂಪಲ್ ಟ್ರಸ್ಟ್ (ರಿ.) ಇದರ ವತಿಯಿಂದ ಜೀರ್ಣೋದ್ಧಾರವಾಗುತ್ತಿರುವ ಶ್ರೀ ದೇವಸ್ಥಾನದಲ್ಲಿ ಆಗಸ್ಟ್ 18 ಮತ್ತು 19ರಂದು ಶ್ರೀ ದೇವಸ್ಥಾನದ ಆವರಣದ ಗೋಡೆ ಯಲ್ಲಿರುವ ಶ್ರೀ ಸಾಸ್ತಾರ ದೇವರ ಬಿಂಬವನ್ನು ಆವರಣದ ಹೊರಗೆ ಬಾಲಾಲಯದಲ್ಲಿ ಪ್ರತಿಷ್ಠೆ ಮಾಡಲಾಯಿತು. ಶ್ರೀ ದೇವಸ್ಥಾನದ ತಂತ್ರಿಯವರಾದ ಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ 2 ದಿನ ಧಾರ್ಮಿಕ ವಿಧಿ ವಿಧಾನವನ್ನು ನೆರವೇರಿಸಲಾಯಿತು. ಜೀರ್ಣೋದ್ಧಾರ ಕಾರ್ಯಕ್ರಮದ ಅಂಗವಾಗಿ ಸುತ್ತಲಿನ 25 ಅಡಿ ಜಾಗವನ್ನು ಸಮತಟ್ಟುಗೊಳಿಸುವ ಕೆಲಸ ಪ್ರಾರಂಭವಾಗಿದ್ದು, ತಾರೀಕು 26ರಂದು ಶಿಲ್ಪಿಯವರಿಂದ ಕಟ್ಟಡದ ಕೆಲಸ ಪ್ರಾರಂಭಗೊಂಡಿದೆ. ಈ ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರಾದ ಕೆ.ಸುಬ್ಬರಾವ್, ಕಾರ್ಯದರ್ಶಿ ಶ್ರೀ ಕರುಣಾಕರ ಬೆಳ್ಳೆ, ಕಾರ್ಯಾಧ್ಯಕ್ಷರಾದ ದಿವಾಕರ ರಾವ್ ಪಡುಬಿದ್ರಿ, ಉಪಾಧ್ಯಕ್ಷರಾದ ಜಯರಾಮರಾವ್ ಉಡುಪಿ, ಪ್ರಫುಲ್ಲಚಂದ್ರರಾವ್ ಉಡುಪಿ, ಜತೆ ಕಾರ್ಯದರ್ಶಿ ಸುಧಾಕರ ರಾವ್ ಮುಂಡ್ಕೂರು, ಸಮಿತಿ ಸದಸ್ಯರು, ಸಮಾಜ ಬಾಂಧವರು, ಊರವರು ಮತ್ತು ದೇವಸ್ಥಾನ ಅರ್ಚಕರಾದ ಶ್ರೀ ಜಗದಾಭಿರಾಮ ಸ್ವಾಮಿ, ಟ್ರಸ್ಟ್‌ನ ಕಾರ್ಯದರ್ಶಿ ಶ್ರೀನಿವಾಸ ಶರ್ಮರು ಉಪಸ್ಥಿತರಿದ್ದರು.

ವರದಿ : **ಶ್ರೀನಿವಾಸ ಶರ್ಮ**

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೊ ಆಟ ಕೂಟ'



ಚಿತ್ರ : ರಘುವೀರ, ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ಚರ್ಚು ರಸ್ತೆ, ಮಂಗಳೂರು ಇದರ ಯುವ ವೇದಿಕೆ ಹಾಗೂ ಮಹಿಳಾ ವೇದಿಕೆಯ ಆಶ್ರಯದಲ್ಲಿ ತಾ.07-08-2011ರ ಆದಿತ್ಯವಾರದಂದು 'ಆಟಿತೊ ಆಟ ಕೂಟ' ಎಂಬ ವಿಶಿಷ್ಟ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆ ಸಾಮೂಹಿಕ ಸತ್ಯನಾರಾಯಣ ಪೂಜೆಯ ಸಂಕಲ್ಪ ಹಾಗೂ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣದಿಂದ ಕಾರ್ಯಕ್ರಮ ಆರಂಭಗೊಂಡಿತು. ನಂತರ ಆಟಿಯ ವಿಶಿಷ್ಟ ಆಟಗಳಾದ ಚೆನ್ನಮಣೆ ಹಾಗೂ ಕೇರಂ ಸ್ಪರ್ಧೆಗಳನ್ನು ಶ್ರೀಯುತ ಸಿ.ಶ್ರೀಪತಿ ರಾವ್ ಹಾಗೂ ಶ್ರೀ ಭುಜಂಗ ರಾವ್ ಯು. ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಅರುಣಾ ಸೋಮಶೇಖರ್‌ರವರು 'ಕಲ್ಲಾಟ'ದ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. ಮಹಾಪೂಜೆ, ಮಂಗಳಾರತಿಯ ನಂತರ ಆಟಿಯ ವಿಶೇಷ ಖಾದ್ಯಗಳನ್ನು ಒಳಗೊಂಡ ಪ್ರಸಾದ ಭೋಜನವನ್ನು ಸಮಾಜ ಬಾಂಧವರು ಸವಿದರು. ಮಧ್ಯಾಹ್ನದ ನಂತರದ ಕಾರ್ಯಕ್ರಮದಲ್ಲಿ ಯುವ ವೇದಿಕೆಯ ಉಪಾಧ್ಯಕ್ಷರಾದ ಶ್ರೀಯುತ ನಾಗರಾಜ ಶರ್ಮರವರು ಆಟಿಯ ಬಗೆಗಿನ ರಸ ಪ್ರಶ್ನೆಗಳನ್ನು ನಡೆಸಿಕೊಟ್ಟರು. ನಂತರ ನಡೆದ 'ಕರೋಕೆ ರಸಮಂಜರಿ' ರಸಮಂಜರಿ ಕಾರ್ಯಕ್ರಮದಲ್ಲಿ ಸಮಾಜದ ಪ್ರತಿಭಾವಂತರು ತಮ್ಮ ಮಧುರ ಗಾನದ ಮೂಲಕ ಸಭಿಕರನ್ನು ರಂಜಿಸಿದರು. ರಸಮಂಜರಿಯ ನಡುವೆ ಒಗಟು ಬಿಡಿಸುವ ಸ್ಪರ್ಧೆಯನ್ನು ನಡೆಸಲಾಯಿತು. ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಪಿ. ಶ್ರೀಕಾಂತ್‌ರಾವ್‌ರವರು ಕಾರ್ಯಕ್ರಮ ನಿರ್ವಹಿಸಿದರು. ದ್ವಿತೀಯ ಬಾರಿ ನಡೆಯುತ್ತಿರುವ ಈ ಕಾರ್ಯಕ್ರಮವು ಸಮಾಜ ಬಾಂಧವರ ಸಂಪೂರ್ಣ ಸಹಕಾರದೊಂದಿಗೆ ಅಭೂತಪೂರ್ವ ಯಶಸ್ಸನ್ನು ಗಳಿಸಿತು.

**ಬಹುಮಾನ ಪಡೆದವರು :**

**ಕೇರಂ-16 ವರುಷಕ್ಕಿಂತ ಮೇಲ್ಪಟ್ಟವರ ವಿಭಾಗ :**

ಪ್ರಥಮ ಬಹುಮಾನ : **ಶ್ರೀ ಬಿ.ಜಯಚಂದ್ರ ಮತ್ತು ಶ್ರೀ ಮನೀಶ್ ರಾವ್**

ದ್ವಿತೀಯ ಬಹುಮಾನ : **ಶ್ರೀಮತಿ ಜ್ಞಾನೇಶ್ವರಿ ಜೋಷಿ ಮತ್ತು ಶ್ರೀ ವಿಹಾರ್ ಜೋಷಿ**

**ಕೇರಂ-16 ವರುಷಕ್ಕಿಂತ ಕೆಳಗಿನವರ ವಿಭಾಗ :** ಪ್ರಥಮ ಬಹುಮಾನ : **ಸುಮಶ್ರೀ ಮತ್ತು ಪ್ರಥಮ್ ರಾವ್**

ದ್ವಿತೀಯ ಬಹುಮಾನ : **ಸಾತ್ವಿಕ ಮತ್ತು ಅರ್ಜುನ್**

**ಆಶುಭಾಷಣ ಸ್ಪರ್ಧೆ :**

ಪ್ರಥಮ ಬಹುಮಾನ : **ಶ್ರೀ ಎಂ.ಆರ್.ವಾಸುದೇವ** ದ್ವಿತೀಯ ಬಹುಮಾನ : **ಶ್ರೀ ಹರಿನಾರಾಯಣ**

ವರದಿ : **ಶ್ರೀ ಪಿ. ಶ್ರೀಕಾಂತ ರಾವ್**

# ಶ್ರೀ ಸುಬ್ರಹ್ಮಣ್ಯ ಸಭಾ : ಚಾತುರ್ಮಾಸ್ಯದ ಶೃಂಗೇರಿ ಪ್ರವಾಸ

ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರ ಚಾತುರ್ಮಾಸ ಪ್ರಯುಕ್ತ ಶೃಂಗೇರಿ ಪ್ರವಾಸವನ್ನು ತಾ.28-8-2011 ಆದಿತ್ಯವಾರದಂದು ಆಯೋಜಿಸಲಾಗಿತ್ತು. ಬೆಳಿಗ್ಗೆ 6-30 ಗಂಟೆಗೆ ಎರಡು ಬಸ್ಸುಗಳಲ್ಲಿ 100ಕ್ಕಿಂತಲೂ ಹೆಚ್ಚು ಸಮಾಜ ಬಾಂಧವರು ಸಂಘದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಇವರ ನೇತೃತ್ವದಲ್ಲಿ ಸಂಗ್ರಹಿಸಲಾದ ಹೊರೆ ಕಾಣಿಕೆ ಹಾಗೂ ಸಭಾದಲ್ಲಿ ತಯಾರಿಸಿದ ಮೂಡೆ, ಸಾಂಬಾರ್, ಚಟ್ನಿ, ಶೀರಾ ಹಾಗೂ ಚಾ ಕಾಪಿಯೊಂದಿಗೆ ಪ್ರಯಾಣ ಪ್ರಾರಂಭಿಸಿತು.

ನಂದಿಕೂರಿನ ಶ್ರೀ ಜನಾರ್ಧನ ರಾವ್‌ರವರ ಮನೆಯಲ್ಲಿ ಕಾಫಿ ತಿಂಡಿ ಸೇವನೆಗೆ ಅಚ್ಚುಕಟ್ಟಿನ ವ್ಯವಸ್ಥೆ ಮಾಡಲಾಗಿತ್ತು. ಸ್ವಾದಿಷ್ಟ ಉಪಹಾರ ಸೇವಿಸಿದ ಸಮಾಜ ಬಾಂಧವರು ಉಪಹಾರ ಒದಗಿಸಿದವರನ್ನು ಹಾಗೂ ಸ್ಥಳಾವಕಾಶ ಮಾಡಿ ಕೊಟ್ಟವರನ್ನು ಮನದಲ್ಲೇ ಕೊಂಡಾಡುತ್ತಾ ಮುಂದೆ ಪ್ರಯಾಣ ಬೆಳೆಸಿದರು.

ಶೃಂಗೇರಿ ತಲುಪಿದ ತಂಡವು ಮೊದಲು ಸರ್ವಾಲಂಕೃತವಾದ ಶ್ರೀ ಶಾರದಾ ಮಾತೆಯ ದರ್ಶನದಿಂದ ಪುಳಕಿತರಾದರು. ಶ್ರೀ ಶಾರದಾಂಬೆಗೆ ಪೂಜೆ ಮುಗಿಸಿ ಎಲ್ಲರೂ ಶ್ರೀಗಳ ದರುಶನಕ್ಕೆಂದು ಗುರುಭವನದತ್ತ ನಡೆದರು. ಅದಾಗಲೇ ಅಲ್ಲಿ ನೆರೆದಿದ್ದ ಬೇರೆ ಬೇರೆ ಊರುಗಳಿಂದ ಬಂದಿದ್ದ ನೂರಾರು ಸಮಾಜ ಬಾಂಧವರು ಪರಿಚಿತರೊಂದಿಗೆ ಉಭಯ ಕುಶಲೋಪರಿ ನಡೆಸಿದರು. ತದನಂತರ ಪಾದ ಪೂಜೆ, ಶ್ರೀಗಳ ಪ್ರವಚನದ ಬಳಿಕ ಫಲ ಮಂತ್ರಾಕ್ಷತೆಯನ್ನು ಸರತಿ ಮೂಲಕ ಪಡೆದ ಸಮಾಜ ಬಾಂಧವರು ಆನಂದ ತುಂದಿಲರಾದರು. ಪ್ರಸಾದ ಭೋಜನವನ್ನು ಸ್ವೀಕರಿಸಿ ಮತ್ತೆ ಮಂಗಳೂರಿಗೆ ಪ್ರಯಾಣಿಸಿದ ತಂಡವು ಎಸ್.ಕೆ.ಬಾರ್ಡರ್‌ನಲ್ಲಿ ಬನ್ಸ್ ಮತ್ತು ಚಹಾವನ್ನು ಇಬ್ಬನಿ ತುಂಬಿದ ವಾತಾವರಣದ ಪ್ರಕೃತಿಯೊಂದಿಗೆ ಸವಿದರು.


ಪ್ರಯಾಣದ ಪ್ರಯಾಸ ಅರಿವಾಗದಂತೆ ಮಾಡಲು ಶ್ರೀಯುತ ಪಿ. ಶ್ರೀಕಾಂತ ರಾವ್‌ರವರು ಎಲ್ಲರ ಸಹಕಾರದಿಂದ ಹಲವಾರು ಮನೋರಂಜನ ಕಾರ್ಯಕ್ರಮಗಳನ್ನು ನಡೆಸಿದರು. ಮರಳಿ ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ಆಗಮಿಸಿದ ಸಮಾಜ ಬಾಂಧವರ ವದನದಲ್ಲಿ ಶೃಂಗೇರಿ ಶ್ರೀ ಶಾರದಾ ಮಾತೆಯ ದರುಶನ ಹಾಗೂ ಶ್ರೀ ಗುರುಗಳ ಆಶೀರ್ವಚನ ಆಲಿಸಿದ ಧನ್ಯತಾಭಾವ ಕಂಡು ಬಂತು. ಪ್ರವಾಸದ ಸಂಯೋಜಕರಾದ ಸಂಘದ ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್, ಬಿ.ಎಸ್.ರವರು ಹಾಗೂ ಹೊರೆಕಾಣಿಕೆಗಳನ್ನು ಶ್ರೀಗಳ ಸನ್ನಿಧಾನಕ್ಕೆ ತಲುಪಿಸಿದ ಯುವ ವೇದಿಕೆಯ ಸದಸ್ಯರು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರರಾದರು.

ವರದಿ : **ಶ್ರೀ ಪಿ. ಶ್ರೀಕಾಂತ ರಾವ್**

Krishna Rao
Ph :2520652
Mob. :9902029048

**KISHAN**

Studio & Video

Indoor Photography & Port Folio Photography, Video & Mixing, Lamination

MAIN ROAD, MAJOOR & BANTAKAL.

# ಮಕ್ಕಳು ಮತ್ತು ಶಿಸ್ತು



- ವೈ. ಮೋಹನರಾವ್

ಪದವಿಪೂರ್ವಕಾಲೇಜುಗಳಲ್ಲಿ ವಾಣಿಜ್ಯ ಉಪನ್ಯಾಸಕನಾಗಿ 40 ವರ್ಷಗಳ ಕಾಲ ಕಾರ್ಯನಿರ್ವಹಿಸಿರುತ್ತೇನೆ. ಸಪ್ಟೆಂಬರ್ 5 ಶಿಕ್ಷಕರ ದಿನಾಚರಣೆ. ಮೇಧಾವಿ ಶಿಕ್ಷಕರಾಗಿದ್ದು ರಾಜಕೀಯ ಮುತ್ಸದ್ದಿಯಾಗಿದ್ದು ನಮ್ಮ ದೇಶದ ರಾಷ್ಟ್ರಪತಿಯಾಗಿದ್ದ ಡಾ. ರಾಧಾಕೃಷ್ಣನ್ ಅವರ ಜನ್ಮ ದಿನೋತ್ಸವವನ್ನು ಶಿಕ್ಷಕರ ದಿನ ಎಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಈ ಲೇಖನ. ಉದಯವಾಣಿಯಲ್ಲಿಯೂ ಈಗಾಗಲೇ ಪ್ರಕಟಿತಗೊಂಡಿರುತ್ತದೆ.

ಮನೆಯೇ ಮಕ್ಕಳ ಮೊದಲ ಶಾಲೆ. ಮಕ್ಕಳೇ ಮನೆಯ ಮಾಣಿಕ್ಯ. ಮಕ್ಕಳ ಶಿಸ್ತಿನ ಜೀವನವೂ ಅವರ ಮನೆಯಲ್ಲೇ ಪ್ರಾರಂಭವಾಗುತ್ತದೆ. ಹಲವು ಮನೆಗಳಲ್ಲಿ ಮಕ್ಕಳನ್ನು ಬೆಳೆಸುವ ರೀತಿ ಅಸಮಾಧಾನ ತರುವಂತಹದ್ದು. ಮಕ್ಕಳಿಗೆ ಸ್ವಾತಂತ್ರ್ಯ ಕೊಡಬೇಕು. ಅವರನ್ನು ಮುದ್ದು ಮಾಡಬೇಕು. ಪ್ರೀತಿ ವಾತ್ಸಲ್ಯ ಎಲ್ಲವೂ ಸಹಜ. ಆದರೆ ಅದು ಮಿತಿ ಹಾಗೂ ಜವಾಬ್ದಾರಿಯಿಂದಿರ ಬೇಕು. ಒಂದೊಂದು ಸಲ ಬೆತ್ತ ಪ್ರಯೋಗಿಸದಿದ್ದರೆ ಮಕ್ಕಳು ಹಾಳಾಗುವುದುಂಟಂತೆ. ಆದ್ದರಿಂದ ಅವರನ್ನು ಒಮ್ಮೊಮ್ಮೆ ಖಂಡಿಸುವುದೂ ದಂಡಿಸುವುದೂ ಪ್ರೀತಿಯ ಲಕ್ಷಣವೇ.

ಮಕ್ಕಳು ಮನೆಯಲ್ಲಿ ಗಲಾಟೆ ಮಾಡುವುದು ಬೇಡವೆಂದು ಅವರನ್ನು ಶಾಲೆಗೆ ಕಳುಹಿಸುವಂತಾಗ ಬಾರದು. ಮಕ್ಕಳಿಗೆ ರಜೆ ಯಾವಾಗ ಮುಗಿಯು ತ್ತದಪ್ಪಾ ಎಂದು ಕೆಲವರು ನಿಟ್ಟುಸಿರು ಬಿಡುವುದುಂಟು. ಇದರ ಧ್ವನಿ-ಮಕ್ಕಳಿಗೆ ಯಾವಾಗ ಶಾಲೆ ಪ್ರಾರಂಭವಾಗಲಿಲ್ಲ, ಇವರು ಯಾವಾಗ ಶಾಲೆಗೆ ಹೋಗಲಿಲ್ಲ, ಇವರ ಕಾಟ ಯಾವಾಗ ತಪ್ಪಲಿಲ್ಲ ಎಂದಲ್ಲವೇ? ಹಾಗಾದರೆ ಶಾಲೆಗೆ ಕಳುಹಿಸುವಾಗಲಾದರೂ ಅವರಲ್ಲಿ ಒಂದು ಉದ್ದೇಶವನ್ನು ಮನದಟ್ಟು ಮಾಡಿಸಿ, ಸ್ಫೂರ್ತಿಯನ್ನು ತುಂಬಿ ಉದ್ದೇಶವನ್ನು ಈಡೇರಿಸಿಕೊಳ್ಳುವಂತೆ ಬಾಳನ್ನು ಬೆಳಗಿಸುವಂತೆ ಶಾಲೆಗೆ ಕಳುಹಿಸಬೇಕು. ತಾವು ಕೇವಲ ಆರ್ಥಿಕ ನೆರವನ್ನೀವ ಬ್ಯಾಂಕು ಗಳಂತಾಗದೇ ರಕ್ಷಕರು ಅವರ ಪ್ರಗತಿಯ ಬಗ್ಗೆ ಸದಾ ಗಮನ ಕೊಡಬೇಕು. ಒಂದು ಮನೆಯನ್ನು ಕಟ್ಟಲು ಪ್ರಾರಂಭಿಸಿ ಅದನ್ನು ಪೂರ್ತಿಗೊಳಿಸುವ ತನಕ ಹೇಗೆ ಎಲ್ಲಾ ಹಂತಗಳಲ್ಲೂ ಲಕ್ಷ್ಯ ಕೊಡಲಾಗುತ್ತದೋ ಹಾಗೆಯೇ ಮಕ್ಕಳ ವಿದ್ಯಾರ್ಥಿ ಜೀವನದ ವಿವಿಧ ಹಂತಗಳಲ್ಲಿ ರಕ್ಷಕರು ಗಮನವಿತ್ತು ಅವರ ಬೆಳವಣಿಗೆಗೆ ಸಹಕರಿಸಬೇಕು.

ಹಾಗೆಂದು ಮನೆಯಲ್ಲಿ ಮಕ್ಕಳನ್ನು ಪ್ರಾಣಿಗಳಿಗೆ ಬಡಿದಂತೆ ಹೊಡೆಯುವುದೂ ಅಲ್ಲ. ಇದು ಶಾಲೆಯಲ್ಲೂ ಸಲ್ಲ. ರ್‍ಯಾಂಕ ಸಿಗಲಿಲ್ಲವೆಂದೋ ಅಥವಾ ಫಸ್ಟ್‌ಕ್ಲಾಸ್ ಬರಲಿಲ್ಲವೆಂದೋ ಅಥವಾ ತಮ್ಮ ಆಶೆ ನಿರೀಕ್ಷೆಗಳಂತೆ ಮಟ್ಟ ತಲುಪಲಿಲ್ಲ ವೆಂದೋ ಅವರನ್ನು ಜರೆಯುವುದಲ್ಲ, ಏಕ್‌ದಂ ಪೆಟ್ಟು ಕೊಡುವುದಲ್ಲ. ಇದು ಅವರಿಗೆ ಕೇವಲ ಚಿತ್ರ ಹಿಂಸೆ ಆದೀತು. ಆದ್ದರಿಂದ ಮಕ್ಕಳ ಅಭಿರುಚಿಗೆ ತಕ್ಕಂತೆ ಅವರ ಆಸಕ್ತಿ, ಶಕ್ತಿ-ಸಾಮರ್ಥ್ಯಗಳಿಗೆ ತಕ್ಕಂತೆ ಮತ್ತು ಅವರ ಜೀವನೋದ್ದೇಶಕ್ಕನುಗುಣವಾಗಿ ಸಮಜಾಯಿಸಿ ಸಮಾಧಾನಿಸುವುದು, ಸುಧಾರಿಸುವುದು ಸರಿಯಾದ ದಾರಿಯಾಗಿದೆ. ಇದು ಕಷ್ಟದ ಕೆಲಸವೇ. ಆದರೆ ಇದೂ ಒಂದು ಕಲೆಯೇ ಸರಿ.

ಇನ್ನು ಶಿಸ್ತು ಎಂದಾಗ ಒಂದು ಪ್ರಶ್ನೆ ಉದ್ಭವಿಸುತ್ತದೆ. ಶಿಸ್ತು ಕೇವಲ ಶಾಲಾ-ಕಾಲೇಜು ವಾತಾವರಣಕ್ಕೆ ಮಾತ್ರ ಸೀಮಿತವೇ? ಒಟ್ಟು ಸಮಾಜ ವ್ಯವಸ್ಥೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮಾತ್ರ ಶಿಸ್ತಿನ ಸಿಪಾಯಿಗಳಾದರೆ ಸಾಕೇ? ಅಧ್ಯಾಪಕರಲ್ಲಿ ಶಿಸ್ತು ಅನಿವಾರ್ಯ. ವಿದ್ಯಾರ್ಥಿಗಳು ಶಿಸ್ತನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣ ಕ್ಷೇತ್ರದಲ್ಲಿ ನೀತಿ ಮೌಲ್ಯಗಳನ್ನು ಮೈಗೂಡಿಸಿಕೊಳ್ಳ ಬೇಕು. ಇವೇ ಮೊದಲಾದವು ವೇದಿಕೆಯನ್ನೇರುವ ಎಲ್ಲರೂ ಸುಲಭವಾಗಿ ಪಠಿಸುವ ಮಹಾಮಂತ್ರ ಗಳು. ಆದರೆ ಶಿಕ್ಷಕರೋ ಸ್ವಯಂಪ್ರೇರಿತ ಶಿಸ್ತಿನ ರೇಖೆಗಳನ್ನು ಎಳೆದುಕೊಂಡವರು. ವಿದ್ಯಾರ್ಥಿ ಗಳೂ ಈ ಲಕ್ಷ್ಮಣ ರೇಖೆಗಳೊಳಗೇ ಇರುವವರು. ಶಾಲೆಯ ಈ ವಾತಾವರಣದಲ್ಲಿ ಮಾತ್ರ ಮಕ್ಕಳು ವಿದ್ಯಾರ್ಥಿಗಳು ಬೆಳೆಯುವುದಿಲ್ಲ. ಇನ್ನುಳಿದ ಪರಿಸರದಲ್ಲಿ ಅದೂ ಹೆಚ್ಚಾಗಿ ತಮ್ಮ ಕುಟುಂಬ, ನೆರೆಹೊರೆಯವರು ಮತ್ತು ಸಾರ್ವಜನಿಕ ವ್ಯವಸ್ಥೆ ಯಲ್ಲಿ ಬೆಳೆಯುತ್ತಾರೆ. ಪ್ರಭಾವಿತರಾಗುತ್ತಾರೆ. ಮನೆ ಯವರೋ ನೆರೆಹೊರೆಯವರೋ ಸಾಮಾಜಿಕ ರೋ ಕುಡುಕರು, ತಲೆಹಿಡುಕರು, ಅಧಿಕ ಪ್ರಸಂಗಿಗಳೋ ಆದರೆ ಮಕ್ಕಳ ಮೇಲೆ ಪರಿಣಾಮ ಬೀರುವುದು ಖಂಡಿತ.

ಶಾಲೆಗಳಲ್ಲಿ ಮಕ್ಕಳಿಗೆ ಬೋಧಿಸುವ ನೀತಿ ಮೌಲ್ಯಗಳು ಅವರು ಶಾಲೆಗಳಿಂದ ಹೊರ ಬಂದಾಗ ಕಾಣಲು ಸಾಧ್ಯವೇ? ಮರ ಕಡಿಯಬೇಡಿ ಎಂದು ಶಾಲೆಯಲ್ಲಿ ಪರಿಸರದ ಬಗ್ಗೆ ಪಾಠ ಹೇಳ ಬಹುದು. ಆದರೆ ಮಕ್ಕಳು ಶಾಲೆಯಿಂದ ಹೊರಗೆ ಬಂದಾಗ ಕಾಣುವುದೇನು? ಧೂಮಪಾನ, ಮದ್ಯಪಾನದ ಕೆಡುಕುಗಳ ಬಗ್ಗೆ ಶಾಲೆಯಲ್ಲಿ ಪ್ರಬಂಧ ಬರೆಯಿಸಬಹುದು. ಆದರೆ ಮಕ್ಕಳು ಶಾಲೆಯಿಂದ ಹೊರಗೆ ಬಂದಾಗ ಕಾಣುವುದೇನು? ಸತ್ಯವೇ ತಾಯಿ-ತಂದೆ ಎಂದು ಗೋವಿನ ಕಥೆಯ ನೀತಿಯನ್ನು ಮನದಟ್ಟು ಮಾಡಿ ಶಾಲೆಯಲ್ಲಿ ಹೇಳಬಹುದು. ಆದರೆ ಮಕ್ಕಳು ಶಾಲೆಯಿಂದ ಹೊರಗೆ ಬಂದಾಗ ಕಾಣುವ ಸತ್ಯ ಏನು? ಟಿ.ವಿ. ಹೆಚ್ಚು ನೋಡಬೇಡಿ ಎಂದು ಶಾಲೆಯಲ್ಲಿ ಉಪದೇಶಿಸಬಹುದು. ಆದರೆ ಮನೆಯಲ್ಲಿ ಮನೆ ಯವರೇ ಇಡೀ ದಿನ ನೋಡುವುದಾದರೆ ಮಕ್ಕಳ ಗತಿಯೇನು?

ಇನ್ನು ರಾಜಕೀಯವೆಂಬ ಚಕ್ರವ್ಯೂಹದ ಒಳಗೆ ಹೋಗಲು ಮಕ್ಕಳಿಗೆ ವಿದ್ಯಾರ್ಥಿಗಳಿಗೆ ದಾರಿ ಬಹಳ ಸುಲಭ ಹಾಗೂ ಸುಗಮವಾಗಿದೆ. ಆದರೆ ಈ ಚಕ್ರವ್ಯೂಹದಿಂದ ಹೊರಬರಲು ಅವರಿಗೆ ದಾರಿ ಕಾಣದಾಗಿದೆ. ರಾಜಕೀಯಕ್ಕೆ ಹೆಚ್ಚು ಶಿಕ್ಷಣ ಹೋಗದೆ ಶಿಕ್ಷಣಕ್ಕೇ ಹೆಚ್ಚು ರಾಜಕೀಯ ಬಂದು ಬಿಟ್ಟಿದೆ ಎಂದು ಹಲವರ ಪ್ರಾಮಾಣಿಕ ಕೊರಗು ಇದೆ. ಶಿಕ್ಷಕರಿಗೇ ಉಪದೇಶಿಸುವುದು, ಮುಗ್ಧ ವಿದ್ಯಾರ್ಥಿಗಳನ್ನು ತಮ್ಮ ಸ್ವಾರ್ಥ ಸಾಧನೆಗೆ ಉಪಯೋಗಿಸಿಕೊಳ್ಳುವುದು ಅಗ್ಗದ ಕೀರ್ತಿ ಸಂಪಾದನೆ, ಏನಾದರೊಂದು, 'ಮಾಡುವ ದೊಂದು, ಜಾತಿ-ಮತ ಭಾಷೆ, ಸ್ವಾರ್ಥಗಳೆಲ್ಲದರ ತುಳಿತಕ್ಕೆ ಇವರ ಬದುಕು ನುಚ್ಚುನೂರಾಗುವುದು. ಆದ್ದರಿಂದ ಶಾಲೆಗಳಲ್ಲಿ ಮಾತ್ರ ಶಿಸ್ತು ಸಾಕಾದೀತೇ?

ಆದರಿಂದ ಹರಿಶ್ಚಂದ್ರ ಸತ್ಯಸಂಧತೆ, ರಾಮವಾತ್ಸಲ್ಯ, ಹನುಮಂತ ನಿಷ್ಠೆ, ಭರತ ಭ್ರಾತೃಭಕ್ತಿ, ಕೃಷ್ಣ ಕಾರುಣ್ಯ, ಅರ್ಜುನ ಲಕ್ಷ್ಯ, ಕರ್ಣ ಏಕಾಗ್ರತೆ, ಭಗೀರಥ ಸಾಹಸ, ನಚಿಕೇತ ಪ್ರಯತ್ನ, ಏಕಲವ್ಯ ಗುರುಭಕ್ತಿ, ಮಾರ್ಕಂಡೇಯ ದೈವಭಕ್ತಿ, ಗಾಂಧೀಜಿ ಅಹಿಂಸಾವಾದ, ವಿವೇಕ ದೇಶಪ್ರೇಮ ಮುಂತಾದ ಗುಣಗಳು ಎಲ್ಲರ ಬದುಕಿನ ಅವಿಭಾಜ್ಯ ಅಂಗಗಳಾಗಬೇಕು. ಆಗ ಮಾತ್ರ ಸ್ವಸ್ಥ ಸಮಾಜ ಮತ್ತು ಸುಖೀ ದೇಶವನ್ನು ಕಟ್ಟಲು ಸಾಧ್ಯ. □

## ಉಡುಪಿ ಜಿಲ್ಲಾ ಉತ್ತಮ ಸಾಧಕ ಶಿಕ್ಷಕರು



**ಶರಾವತಿ ಯು.ಆರ್. :**

ಕಾಪು ವಲಯದ ಎಲ್ಲೂರು ಎಸ್‌ವಿಸಿಎಸ್ ಅನುದಾನಿತ ಹಿ.ಪ್ರಾ.ಶಾಲೆಯ ಮುಖ್ಯ ಶಿಕ್ಷಕಿ ಶರಾವತಿ ಯು.ಆರ್. ಅವರು ಒಟ್ಟು 30 ವರ್ಷ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಭಾರತ ಸೇವಾದಲ, ಬುಲ್ ಬುಲ್, ಆಂಗ್ಲ ಭಾಷಾ ತರಬೇತಿ ಹೊಂದಿರುವ ಇವರು ದಾನಿಗಳ ಸಹಾಯದಿಂದ ಮೂಲಭೂತ ಅಭಿವೃದ್ಧಿ ಸಾಧಿಸಿ ಶಾಲಾಭಿವೃದ್ಧಿ ಸಾಧಿಸಿದ್ದಾರೆ. ಇನ್ನಷ್ಟು ಅಭಿವೃದ್ಧಿ ಸಾಧಿಸಲು ಸಂಕಲ್ಪಿಸಿದ್ದಾರೆ. ಉಳ್ಳೂರು ಶಾಲೆ, ಬೆಳಪು ಶಾಲೆಯಲ್ಲಿ ಸೇವೆ ಸಲ್ಲಿಸಿರುವ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಸುಮಾರು 30,000 ಜನರಿಗೆ ಸ್ವಉದ್ಯೋಗದ ಕುರಿತು ಮಾರ್ಗದರ್ಶನ ನೀಡಿದ್ದಾರೆ.



**ಸುಮನಾ ಬಿ. :**

ಕಾರ್ಕಳ ವಲಯದ ಬಜಗೋಳಿ ಸ.ಪ.ಪೂ. ಕಾಲೇಜಿನ ಹಿರಿಯ ಸಹಶಿಕ್ಷಕಿ ಸುಮನಾ ಬಿ. ಅವರು ಒಟ್ಟು 26 ವರ್ಷ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಮೂಡಬಿದಿರೆ ವಲಯದ ನೆಲ್ಲಿಕಾರು, ಬೆಳ್ಮಣ್ಣು ವಲಯದ ಕರಾಯ ಸರಕಾರಿ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸಿರುವ ಸುಮನಾ ಅವರು ಪ್ರಸ್ತುತ ಬಜಗೋಳಿಯಲ್ಲಿ ಸಹಶಿಕ್ಷಕರು. ಶಾಸ್ತ್ರೀಯ ಸಂಗೀತ, ಲಘು ಸಂಗೀತ, ಭಾಷಣ, ಆಶುಭಾಷಣ, ಕವನ ರಚನೆ ಇವರ ಹವ್ಯಾಸವಾಗಿದೆ.

## ಪ್ರಾಥಮಿಕ ಶಾಲಾ ಶಿಕ್ಷಕರ ರಾಜ್ಯ ಪ್ರಶಸ್ತಿ ವಿಜೇತರು



**ಸರೋಜಿನಿ ಕೆ. :**

ಪುತ್ತೂರು ತಾಲೂಕಿನ ಮೇನಾಲ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಸರೋಜಿನಿ ಕೆ. ಅವರಿಗೆ ಈ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ರಾಜ್ಯ ಪ್ರಶಸ್ತಿ ದೊರೆತಿದೆ.

ಇವರಿಗೆ 2001ರಲ್ಲಿ ಜನ ಮೆಚ್ಚಿದ ಶಿಕ್ಷಕಿ ಪ್ರಶಸ್ತಿ, 2010ರಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ಹಾಗೂ ರಾಜ್ಯ ಮಟ್ಟದ ಡಾ| ರಾಧಾಕೃಷ್ಣನ್ ಅತ್ಯುತ್ತಮ ಎಸ್.ಡಿ.ಎಂ.ಸಿ. ಕಾರ್ಯದರ್ಶಿ ಪ್ರಶಸ್ತಿ ಕೂಡಾ ಪ್ರಾಪ್ತವಾಗಿದೆ. ಮೇನಾಲ ಶಾಲೆಯಲ್ಲಿ ಆರೋಗ್ಯ ಕ್ಲಬ್, ಕ್ರೀಡಾ ಸಂಘ, ವಿಜ್ಞಾನ ಸಂಘ ಮತ್ತು ಕಲಾ ಸಂಘಗಳನ್ನು ಸ್ಥಾಪಿಸುವ ಮೂಲಕ ಸರೋಜಿನಿ ಅವರು ವಿದ್ಯಾರ್ಥಿಗಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ಕೂಡಾ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದಾರೆ. ಸಂಸ್ಕೃತ ಭಾಷಾ ಪಾಂಡಿತ್ಯ ಹೊಂದಿರುವ ಇವರು ಸಂಪನ್ಮೂಲ ವ್ಯಕ್ತಿಯಾಗಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶಾಲೆಯಲ್ಲಿ ಚಿತ್ರಕಲಾ ಶಿಬಿರ, ಚುಟುಕು ಸಾಹಿತ್ಯ ಸಮ್ಮೇಳನ, ಪ್ರತಿಭಾ ದಿನೋತ್ಸವ ಹಾಗೂ ತಾಲೂಕು ಮಟ್ಟದ ಇಲಾಖಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸಿರುತ್ತಾರೆ.

## ''ಸೋಣಡೊಂಜಿ ಬಯ್ಯ''

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಭಾ ಪಡುಬಿದ್ರಿ ಇದರ ಮಹಿಳಾ ವೇದಿಕೆಯವರು ದಿನಾಂಕ 10-9-2011ರಂದು ಸಂಜೆ ''ಸೋಣಡೊಂಜಿ ಬಯ್ಯ'' ಕಾರ್ಯಕ್ರಮವನ್ನು ತುಂಬಾ ಅರ್ಥ ಪೂರ್ಣವಾಗಿ ಆಚರಿಸಿದರು.

ಪಡುಬಿದ್ರಿ ಎಮ್.ಕೆ. ದಿವಾಕರ ರಾವ್‌ರವರ ಮನೆಯಲ್ಲಿ ಸಂಜೆ 4 ಗಂಟೆಗಿಂತ ಮೊದಲೇ ಸೇರಿದ್ದ ಸುಮಾರು 150ಕ್ಕೂ ಹೆಚ್ಚು ಮಹಿಳೆಯರು ಮನೆಯ ಒಳಗೆ ದೇವರ ಪ್ರಾರ್ಥನೆ, ಪೂಜೆ ನಡೆಸಿ ಮಂಗಳಾರತಿ ಹಾಡಿದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಹಿಳೆಯರು ಮಾತ್ರವಲ್ಲದೆ ಮಹನೀಯರು, ಮಕ್ಕಳೂ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು.

ಸಭೆಯ ಅಧ್ಯಕ್ಷತೆಯನ್ನು ಉಡುಪಿ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಎಮ್.ಸದಾನಂದ ರಾಯರು ವಹಿಸಿದ್ದರು. ಪಡುಬಿದ್ರಿ ಸ್ಥಾನಿಕ ಸಭಾದ ಅಧ್ಯಕ್ಷರಾದ ಎಮ್.ಕೆ. ಮೋಹನ ರಾವ್, ಸ್ಥಾಪಕಾಧ್ಯಕ್ಷರು ಹಾಗೂ ಪೋಷಕರಾದ ವಾಸುದೇವರಾವ್ ಮತ್ತು ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಶರಾವತಿಯವರು ವೇದಿಕೆ ಯಲ್ಲಿ ಉಪಸ್ಥಿತರಿದ್ದರು. ಎಲ್ಲರನ್ನು ಸ್ವಾಗತಿಸಿದ ಮಹಿಳಾ ವೇದಿಕೆಯ ಅಧ್ಯಕ್ಷ ಶ್ರೀಮತಿ ಶರಾವತಿ ಅವರು ಪ್ರಾಸ್ತಾವಿಕ ಮಾತುಗಳಿಂದ ''ಸೋಣ ಡೊಂಜಿ ಬಯ್ಯ'' ಕಾರ್ಯಕ್ರಮವನ್ನು ವಿವರಿಸಿದರು. ನಂತರ ಸ್ಥಾನಿಕ ಸಭಾ ಹಾಗೂ ಮಹಿಳಾ ವೇದಿಕೆಯವರ ವತಿಯಿಂದ ಶ್ರೀಮತಿ ಲಲಿತಾರವರು ಜಿಲ್ಲಾ ಶಿಕ್ಷಕ ಪ್ರಶಸ್ತಿ ವಿಜೇತರಾದ ಶ್ರೀಮತಿ ಶರಾವತಿಯವರನ್ನು ಸನ್ಮಾನಿಸಿದರು. ಸನ್ಮಾನಕ್ಕೆ ಉತ್ತರಿಸಿದ ಶ್ರೀಮತಿ ಶರಾವತಿಯವರು ತಾನು ಶಿಕ್ಷಕಿಯಾಗಿ ಅಲ್ಲದೆ ಇತರ ಸೇವಾ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಉಪಯುಕ್ತವಾಗುವ ತರಬೇತಿಗಳನ್ನು ನಡೆಸಿರುತ್ತಿ ರುವುದಾಗಿ ಸಭೆಗೆ ತಿಳಿಸಿ ಮುಂದೆಯೂ ಯಾವುದೇ ಸಂಸ್ಥೆಯವರು ತನ್ನನ್ನು ಸಂಪರ್ಕಿಸಿದಲ್ಲಿ ತರಬೇತಿ ನೀಡಲು ಸಿದ್ಧ ಎಂದು ತಿಳಿಸಿದರು. ಪಡುಬಿದ್ರಿಯ ಸ್ಥಾನಿಕ ಸಭಾ ಹಾಗೂ ಮಹಿಳಾ ವೇದಿಕೆ ತನ್ನನ್ನು ಗುರುತಿಸಿ ಸನ್ಮಾನಿಸಿದ್ದಕ್ಕೆ ಕೃತಜ್ಞತೆ ಅರ್ಪಿಸಿದರು.

ಶ್ರೀಶಾರದಾ ಸೊಸೈಟಿ ಉಡುಪಿಯ ಅಧ್ಯಕ್ಷರು ಮಾತನಾಡಿ ಇಂತಹ ಕಾರ್ಯಕ್ರಮ ಗಳಿಂದ ಸಂಘಟನೆ ವೃದ್ಧಿಸುತ್ತದೆ. ಇಲ್ಲಿಯ ಸ್ಥಾನಿಕ ಸಭಾ ಹಾಗೂ ಮಹಿಳಾ ವೇದಿಕೆಯವರ ಕಾರ್ಯಕ್ರಮಗಳಿಂದ ನನಗೆ ಸಂತೋಷವಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಪಡುಬಿದ್ರಿಯಲ್ಲಿ ನಮ್ಮ ಸೊಸೈಟಿಯ ಶಾಖೆ ಪ್ರಾರಂಭಿಸಿದರೆ ತಮ್ಮ ಸಹಕಾರ ಅಗತ್ಯ ಎಂದು ಸೊಸೈಟಿಯ ಧ್ಯೇಯೋ ದ್ದೇಶಗಳನ್ನು ವಿವರಿಸಿದರು. ಎಮ್.ಕೆ.ದಿವಾಕರ್ ರಾಯರು ಸೊಸೈಟಿಯ ಶಾಖೆ ಪ್ರಾರಂಭಿಸಿದರೆ ನಮ್ಮ ಸಹಕಾರ ಖಂಡಿತ ಇದೆ ಎಂದು ಉತ್ತರಿಸಿದರು. ಸ್ಥಾನಿಕ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಮೋಹನರಾವ್ ಮಾತನಾಡಿ ಹೆಚ್ಚು ಕಾರ್ಯಕ್ರಮಗಳನ್ನು ಮಹಿಳಾ ವೇದಿಕೆಯವರಿಂದ ನಡೆಸಿದರೆ ಸಂತೋಷ. ಇದರಿಂದ ನಮ್ಮ ಪಡುಬಿದ್ರಿ ಸ್ಥಾನಿಕ ಸಭಾವು ಸಕ್ರಿಯವಾಗಿರುತ್ತದೆ ಎಂದು ಮಹಿಳಾ ವೇದಿಕೆಯವರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಥಾಪಕಾಧ್ಯಕ್ಷರಾದ ವಾಸುದೇವರಾವ್ ಸಂದರ್ಭೋಚಿತವಾಗಿ ಮಾತನಾಡಿ ಮಹಿಳಾ ವೇದಿಕೆಯವರಿಗೆ ಶುಭ ಕೋರಿದರು. ಕೊನೆಯಲ್ಲಿ ಶ್ರೀಮತಿ ಲಲಿತಾಂಬ ಪಡುಬಿದ್ರಿ ಧನ್ಯವಾದ ವನ್ನಿತ್ತರು. ಕಾರ್ಯಕ್ರಮವನ್ನು ಸೀತಾ ಟೀಚರ್ ನಿರೂಪಿಸಿದರು. ಸೋಣಡೊಂಜಿ ಬಯ್ಯದ ವಿಶೇಷತೆ ಯೆಂದರೆ ಸುಮಾರು 20ಕ್ಕೂ ಹೆಚ್ಚು ತಿಂಡಿ ತಿನಿಸು ಗಳನ್ನು ಎಲ್ಲ ಮಹಿಳೆಯರು ಅವರವರ ಮನೆಗಳಲ್ಲೇ ತಯಾರಿಸಿ, ಸಭೆಯ ಬಳಿಕ ಬಂದವರಿಗೆ ಉಣಬಡಿಸಿದರು. ಎಲ್ಲರೂ ಸೋಣ ಡೊಂಜಿ ಬಯ್ಯದ ಗಮ್ಮತ್ತಿನ ತಿಂಡಿಯನ್ನು ಸವಿದರು. ಸಭಾ ಕಾರ್ಯಕ್ರಮವು ತುಳು ಭಾಷೆಯಲ್ಲಿಯೇ ನಡೆದುದು ಪ್ರಾಮುಖ್ಯವಾಗಿತ್ತು.

## ಭರತನಾಟ್ಯ ವಿದುಷಿ ಎನ್. ಸುಮಾ ಜಯದೀಪ್



ಎರಡನೇ ತರಗತಿಯಿಂದಲೇ ಬೆಳ್ಮಣ್ ಜೇಸಿ ಸಂಗೀತ ಮತ್ತು ನೃತ್ಯ ಶಾಲೆಯಲ್ಲಿ ವಿದ್ವಾನ್ ಚಂದ್ರಶೇಖರ ನಾವುಡ ಅವರಲ್ಲಿ ನೃತ್ಯಾಭ್ಯಾಸವನ್ನು ಆರಂಭಿಸಿ ವಿದ್ವಾನ್ ಸುಬ್ರಹ್ಮಣ್ಯ ನಾವುಡರಲ್ಲಿ ನೃತ್ಯಾಭ್ಯಾಸವನ್ನು ಮುಂದುವರಿಸಿ ಇದೀಗ ಭರತನಾಟ್ಯ ಜೂನಿಯರ್, ಸೀನಿಯರ್ ಹಾಗೂ ವಿದ್ವತ್ ಪ್ರಥಮ ಮತ್ತು ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಬೆಳ್ಮಣ್ ಪರಿಸರದಲ್ಲಿ 'ಪ್ರಥಮ ನೃತ್ಯ ವಿದುಷಿ' ಎಂಬ ಕೀರ್ತಿಗೆ ಎನ್.ಸುಮಾ ಜಯದೀಪ್ ಪಾತ್ರರಾಗಿದ್ದಾರೆ.

ಅಡ್ವೆ, ಕೆದಿಂಜೆ, ನಿಟ್ಟೆಯಲ್ಲಿ ನೃತ್ಯ ತರಬೇತಿ ಯನ್ನು ನೀಡುತ್ತಾ ನಿಟ್ಟೆ ವಿದ್ಯಾ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದು ಹಲವಾರು ಕಡೆ ತಾನು ಹಾಗೂ ತನ್ನ ಶಿಷ್ಯರೊಂದಿಗೆ ಕಾರ್ಯಕ್ರಮವನ್ನು ನೀಡಿ ಜನ ಮೆಚ್ಚುಗೆ ಗಳಿಸಿರುತ್ತಾರೆ. ಇತ್ತೀಚೆಗೆ ತಾನು ವಿದ್ಯೆ ಕಲಿತ ವಿದ್ಯಾಬೋಧಿನೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಅಮೃತ ಮಹೋ ತ್ಸವದ ಸಂದರ್ಭದಲ್ಲಿ ನೃತ್ಯ ಪ್ರದರ್ಶನ ನೀಡಿ ಶಾಲಾ ಸಂಚಾಲಕರಾದ ಎಂ. ಶೇಷಗಿರಿ ಕಾಮತ್ ಅವರಿಂದ ಸನ್ಮಾನಿತರಾಗಿದ್ದಾರೆ.

ಸಾಂತೂರು, ನಂದಳಿಕೆ, ಬೆಳ್ಮಣ್, ಮುಂಡ್ಕೂರು, ಬಜ್ಪೆ, ನಿಟ್ಟೆ, ಕೆಮ್ಮಣ್ಣು ಹೀಗೆ ಹಲವಾರು ದೇವಸ್ಥಾನಗಳ ಉತ್ಸವದ ಸಂದರ್ಭ ದಲ್ಲಿ ಕಾರ್ಯಕ್ರಮ ನೀಡಿ ಅಪಾರ ಜನ ಮೆಚ್ಚುಗೆ ಗಳಿಸಿರುತ್ತಾರೆ.

ಇವರು ನಂದಳಿಕೆ ಸುಧಾಕರ ರಾವ್ ಮತ್ತು ಶ್ರೀಮತಿ ಗಾಯತ್ರಿ ಅವರ ಪುತ್ರಿಯಾಗಿದ್ದು ಪ್ರಕೃತ ಕಳಸದ ವಿಜಯಲಕ್ಷ್ಮಿ ರಮಾನಾಥರಾಯರ ಮಗ ಜಯದೀಪರೊಂದಿಗೆ ವಿವಾಹವಾಗಿ ಬೆಂಗಳೂರಿನ ಜೆ.ಪಿ.ನಗರದಲ್ಲಿ ನೃತ್ಯ ತರಬೇತಿಯನ್ನು ನೀಡುತ್ತಿದ್ದಾರೆ. ಇವರನ್ನು ಬೆಳ್ಮಣ್ ಜೇಸಿ ನೃತ್ಯ ಮತ್ತು ಸಂಗೀತ ಶಾಲಾ ವತಿಯಿಂದ ದಿನಾಂಕ 10-9-2011, ನೃತ್ಯ ಶಾಲೆಯ ವಾರ್ಷಿಕೋತ್ಸವ ದಿನದಂದು ಸನ್ಮಾನಿಸಲಿದ್ದಾರೆ.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

68. ವಿಜಯನಗರದ ಶ್ರೇಷ್ಠ ಅರಸ ಕೃಷ್ಣದೇವರಾಯನ ಮತ್ತು ಆತನ ಅಧಿಕಾರಿಗಳಲ್ಲೊಬ್ಬನಾದ ನರಸಿಂಹರಾಯ ಮಹಾರಾಯನ ಅಪ್ಪಣೆ ಮೇರೆಗೆ ತಿರುಪತಿಯ ಸ್ಥಾನಿಕನು (ತಾನತ್ತಾರ್) ವ್ಯಾಸತೀರ್ಥ ಶ್ರೀಪಾದರಿಗೆ ಒಂದು ಮನೆ ಮತ್ತು ಕೆಲವು ಉಡುಗರೆಗಳನ್ನಿತ್ತು ಗೌರವಿಸಿದ ಸಂಗತಿಯು ತಿರುಪತಿಯ ವ್ಯಾಸರಾಯ ಮಠದ ದ್ವಾರದಲ್ಲಿರುವ ತಮಿಳು ಶಾಸನದಿಂದ ತಿಳಿದು ಬರುತ್ತದೆ.

69. ಕ್ರಿ.ಶ.1534ರ ಧರ್ಮಶಾಸನ ಪ್ರಕಾರ ಚೆನ್ನಪಟ್ಟಣ ಸೀಮೆಯ ಕೋಡಂಬಳ್ಳಿ ಮಲ್ಲೇಶ್ವರ ದೇವರ ಸ್ಥಾನಿಕನಾಗಿ ಚಂದ್ರಶೇಖರನೆಂಬವನು ನೇಮಿಸಲ್ಪಟ್ಟನು. (ಈಸರಗೂರಿನ ಸ್ಥಾನಿಕತಾನಕ್ಕೆ ಚಂದ್ರಶೇಖರಗೆ ಗದ್ದೆ ಹತ್ತು ಕೊಳಗ ಹೊಲಖಂಡುಗ ಸಲಹುದು)

70. ಮೈಸೂರು ರಾಜ್ಯದ ಹೊಸಕೋಟೆ ತಾಲೂಕಿನ ನಂದಗುಡಿಯ ಮಲ್ಲೇಶ್ವರ ದೇವಸ್ಥಾನದ ಇನ್ನೊಂದು ಶಾಸನವು ಕ್ರಿ.ಶ.1559 ರದಾಗಿದ್ದು, ಮಹಾಮಂಡಲೇಶ್ವರ ರಾಮರಾಯ ತಿರುಮಲರಾಯ ಮಹಾ ಅರಸನ ಏಜಂಟನಾದ ಸುಗತೂರು ತಿಮ್ಮಣ್ಣ ಗೌಡಯ್ಯನು ತನ್ನ ಹೆತ್ತವರ ಪುಣ್ಯಕ್ಕಾಗಿ ಸಿಮಸಂದ್ರರ ಎಂಬ ಗ್ರಾಮವನ್ನು ನಂಚಿಗುಳಿಯ ಮಲ್ಲಿಕಾರ್ಜುನ ದೇವರಿಗೆ ಬಿಟ್ಟು ಕೊಟ್ಟು ಆ ಉಂಬಳಿಯನ್ನು ಸ್ಥಾನಿಕ ಅಪ್ಪಾಜಿ ಎಂಬವರ ವಶಕೊಟ್ಟ ದಾಖಲೆಯು ಸ್ಪಷ್ಟವಾಗಿದೆ. (.... ಧರ್ಮವಾಗಬೇಕೆಂದು ಸ್ಥಾನಿಕ ಅಪ್ಪಾಜಿಗೆ ಪೂಜೆಯನು ಸಮರ್ಪಿಸಿಕೊಂಡು ಇರೆಂದು ಕೊಟ್ಟ ಧರ್ಮಸಾಧನ.

71. ಕ್ರಿ.ಶ.1521ರಲ್ಲು ರಾಮಚಂದ್ರ ದೇವರ ಭಂಡಾರಕ್ಕೆ ತಿಮ್ಮರಾಜನು ಕೊಟ್ಟ ಶಾಸನದ ಪ್ರಕಾರ "ಆಗಮಿಕ ನಾರಾಯಣ ಭಟ್ಟರು ಸ್ಥಾನಿಕ ಮಾದವಯ್ಯಗಳು ಸ್ಥಳದ ಸೇನ ಭೋವ ನರಸಯ್ಯ ಮುಂತಾದ ಸ್ಥಾನದವರು" ಎಂಬುದು ಸ್ಪಷ್ಟವಿದೆ.

72. ಕ್ರಿ.ಶ.1513ನೇ ಶ್ರೀ ವೀರಕೃಷ್ಣದೇವರಾಯನ ಶಾಸನ ಪ್ರಕಾರ "ತಿರುವಿಥಿ ವಿನಿಯೋಗದ ಮಹಾಜನಂಗಳು ಸ್ಥಾನಿಕರು ಸಳಭೋವರು ಮುಂತಾದ ಬ್ರಾಹ್ಮಣ ನಿವೇಶಗಳು ಪೇಟೆಯ ಮಳಿಕೆ ಮನೆಗಳು ಮುಂತಾದ್ದಕ್ಕೆ ಹೋದಗದ್ದೆ" ಎಂಬ ಉಲ್ಲೇಖವಿದೆ.

73. ಶ್ರೀ ವಿರಹರಿಹರರಾಯರ ಕುಮಾರ ಪ್ರತಾಪ ಬುಕ್ಕಮಹಾರಾಯರ ನಿರೂಪಪತ್ರ (ಕ್ರಿ.ಶ.1407) "ಈ ಧರ್ಮವನ್ನು ಬಂಗರ ವಡತನದಲ್ಲಿ ಅಲ್ಲಿಯ ಸ್ಥಾನಿಕರು ನಡಸಿಬಹುದು" ಎಂಬ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ತಾಮ್ರಶಾಸನ.

74. ವಿಜಯನಗರದ ಪ್ರತಾಪ ಪ್ರೌಢವೀರ ಶೇಖರ ದೇವರಾಯನು ಚತುರ್ಸಮುದ್ರ ಮಧ್ಯ ರಾಜ್ಯ ಪರಿಪಾಲಿಸುವಲ್ಲಿ ಅವರ ಮುದ್ರೆ ಉಂಗುರವ ಧರಿಸಿ ಶ್ರೀ ಮನ್ಮಹಾಪ್ರಧಾನ ರಾಮಚಂದ್ರಪ್ಪ ನಾಯಕರು ಇವರ ನಿರೂಪದಿಂದ ನಿಡಸರು ಮಂಗಳೂರು ರಾಜ್ಯವನ್ನಾಳುವ ಕಾಲದಲ್ಲಿ.... ಪೊಳಲಿ ಕೇರದಲ್ಲಿ ಬಾಳಿಹ ನಟ್ಟೋಜ ಸ್ಥಾನಿಕ ವೆಂಕಪ್ಪನ ಸರಿಕರಿಯಲ್ಲು ದೇವರಿಗೆ ಚತುಸ್ಥಾನದವರಿಗೆ ಸಹವಾಗಿ ಬರಕೊಟ್ಟ ಉಭಯ ಶಿಲಾ ಶಾಸನದ ಕ್ರಮವೆಂತೆಂದರೆ......

75. ಎರಡನೆಯ ಬುಕ್ಕರಾಯನ ಕಾಲದ ಕ್ರಿ.ಶ. 1405ರ ಬಾರಕೂರಿನ ಶಾಸನದಲ್ಲಿ ದೇಗುಲದ ಅಧಿಕಾರಿಯಾದ ಸ್ಥಾನ ಪತಿಚಿಕ್ಕಣ್ಣನ ಬೇಡಿಕೆ ಮೇರೆಗೆ ದಾನವು ಮಾಡಲ್ಪಟ್ಟಿದೆ ಎಂದು ತಿಳಿಯುತದೆ. ಅದೇ ಶಾಸನವು ಬಾರಕೂರಿನ ಸ್ಥಾನಿಕ ಪರಿವಾರ ನಾರಾಯಣ ದೇವನಿಗೆ ಮಾಡಿದ ದಾನವನ್ನು ಕುರಿತಾಗಿ ತಿಳಿಸುತ್ತದೆ.

76. ಕ್ರಿ.ಶ.1586ರ ಕಾರ್ಕಳದ ಜೈನ ಶಾಸನದಲ್ಲಿ ಸ್ಥಾನಿಕರ ಹದಿನಾಲ್ಕು ಕುಟುಂಬಗಳು ದೇವರ ವಿಗ್ರಹಗಳನ್ನು ಅಭಿಷೇಕ ಮಾಡಿಸುವುದು, ಪೂಜಿಸುವುದು ಇತ್ಯಾದಿಯಾಗಿ ಬರೆದಿದೆ.

77. ಕಡಲೂರು ತಾಲೂಕಿನ ತಿರುವಸಿ ಎಂಬಲ್ಲಿಯ ದೇವಾಲಯವ ಸೇವೆಗಾಗಿ ದಾನ ಮಾಡಿದ ಒಂದು ಗ್ರಾಮವು ಆ ದೇಗುಲದ ಸ್ಥಾನಿಕ ವಶವಿರಿಸಲ್ಪಟ್ಟ ದಾಖಲೆ ಇದೆ.

78. ಚಿತ್ತೂರು ಜಿಲ್ಲೆಯ ಚಂದ್ರಗಿರಿ ತಾಲೂಕಿನ ಕಲಹಸಿದೇವಾಲಯದ ಸ್ಥಾನಿಕರು ಮದನಾಯಕ ಎಂಬವನಿಗೆ ಒಂದು ಮೊಬಲಗನ್ನು ಉಚಿತವಾಗಿ ಕೊಟ್ಟ ದಾಖಲೆ ಇದೆ.(ಕ್ರಿ.ಶ.1517)

79. ಅಂತೆಯೇ ಒಂದು ಶಿಲಾಶಾಸನವು 'ಎಂಟು ಹಳ್ಳಿಗಳ ಸ್ಥಾನಿಕರ ಮುಂದಿಟ್ಟು ಭೂವಿಭಾಗ ಮಾಡಿದ' ದೃಷ್ಟಾಂತವನ್ನು ಕೊಡುತ್ತದೆ.


80. ಶಾ.ಶ.1463ನೇ (ಕ್ರಿ.ಶ.1541) ಶಾರ್ವರಿ ಸಂವತ್ಸರದಲ್ಲಿ ವಿಜಯನಗರದ ಶ್ರೀ ವೀರಪ್ರತಾಪ ಶ್ರೀ ಅಚ್ಯುತ ದೇವ ಮಹಾರಾಯರು ಕೊಟ್ಟ ಧರ್ಮ ಶಾಸನದಲ್ಲಿ "ಈ ದೇವರಸ್ಥಾನಿಕರು ಗೌತಮಗೋತ್ರದ ಯಜುಶ್ಯಾಖೆಯಮಳುವಾಗಿಲ ಕೇಶವ ದೇವರ ಸ್ಥಾನಿಕ ರಂದಣಾಚಾರ್ಯರ ಮಗ ಚಿನ್ನಪ್ಪಯ್ಯನು ಸ್ಥಳದ ಸೇನಭೋವನು ಹರಿತ ಗೋತ್ರದ ಅಶ್ವಲಾಯನ ಸೂತ್ರದ ಋಕ್ ಶಾಖೆಯ...." ಎಂದಿದೆ.

81. ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನಗಳಲ್ಲಿಯೂ ಅನೇಕ ಶಾಸನಗಳು ಸ್ಥಾನಿಕರಿಗಿದ್ದ ಗೌರವದ ಸ್ಥಾನವನ್ನು ಪುಷ್ಟೀಕರಿಸುತವೆ.

ಮಾಗಡಿ ತಾಲೂಕಿನ ಕಲ್ಯಗ್ರಾಮದ ಕಲ್ಲೇಶ್ವರ ದೇವರ ಪೂಜೆಯು ಸ್ಥಾನಿಕ ಲಿಂಗಣ್ಣ ಒಡೆಯರ ಮಗ ಚಂದ್ರಶೇಖರ ಒಡೆಯರಿಂದ ನಡೆಯುತ್ತಿತೆಂದೂ (ಕ್ರಿ.ಶ.1621) ನೆಲ್ಲೂರು ಜಿಲ್ಲೆಯ ಚೆನ್ನಕೇಶವ ದೇವಾಲಯದ ಅಧಿಕಾರಿಯಾಗಿ ಅಲ್ಲಿಯ ಸ್ಥಾನಪತಿಯಾಗಿದ್ದನೆಂದೂ (1697–98) ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಕ್ರಿ.ಶ.1700ರಲ್ಲಿ ದೊರಕಿದ ಶಾಸನದಲ್ಲಿ 'ಸೆಟ್ಟಿ–ಪಟ್ಟಣ–ಸ್ವಾಮಿಗಳು ಬೇಲೂರು ಸ್ಥಾನದಮರು' ಸೇರಿ ಜಾರಿಗೆ ತಂದ ಸಾಮಾಜಿಕ ಕಾನೂನಿನ ದಾಖಲೆಯೂ ಕ್ರಿ.ಶ.1634ರಲ್ಲಿ ಶ್ರವಣ ಬೆಳಗೊಳದ ಸ್ಥಾನದವರ ಸಾಲವನ್ನು ಸರಕಾರವು ತೀರಿಸಿದ ಸಂಗತಿಯೂ, ಕ್ರಿ.ಶ.1669ರಲ್ಲಿ ಎಳಹಂತನಾಡಿದ ಪ್ರಭು ಇಮ್ಮಡಿ ಕೆಂಪಗೌಡನು ವಿರೇಶ್ವರ ದೇವಾಲಯದ ಸ್ಥಾನಿಕ ಲಿಂಗಮಯ್ಯನ ಅನುಮತಿ ಮೇರೆಗೆ ನಾಮಶಿವಯ್ಯ ದೀಕ್ಷಿತರಿಗೆ ಮಾಡಿದ ರಿಯಾಯಿತಿಗಳೂ, ಕ್ರಿ.ಶ.1759ರ ಸನದಿನ ಪ್ರಕಾರ ಮುಮ್ಮಡಿ ಕೃಷ್ಣರಾಜ ಒಡೆಯರು ನಂಜನಗೂಡು ದೇವಾಲಯಕ್ಕೆ ಶಂಕರದೀಕ್ಷಿತರ ಸ್ಥಾನದಲ್ಲಿ ಭಗವಾನು ಶಾಸ್ತ್ರಿಗಳನ್ನು ಸ್ಥಾನಿಕನಾಗಿ ನೇಮಿಸಿದ ದಾಖಲೆಯೂ, ನಮ್ಮದೇ ಶತಮಾನದಲ್ಲಿ ಪೆರಿಯಾಕುಳಂ ತಾಲೂಕಿನ ಶಿನ್ನಮುನ್ನೂರು ವಿಷ್ಣು ದೇವಾಲಯದ ಆಡಳಿತ ಮುಕೇಸರರು ಭೈರವ ಐಯ್ಯರೆಂಬ ಸ್ಥಾನಿಕನಾಗಿದ್ದ ವಿಷಯವೂ–ಬಹು ವಿಚಾರಣೀಯವೂ ಗಣನೀಯವೂ ಆಗಿದೆ.

(ಮುಂದುವರಿಯುವುದು)

# ಕವಿಕಾವ್ಯ ಪರಿಚಯ-೧ : ಕವಿವರ ಲಕ್ಷ್ಮೀಶ



– ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

*ಪುಣ್ಯಮಿದು ಕೃಷ್ಣಚರಿತಾಮೃತಂ ಸುಕವೀಂದ್ರ।*
*ಗಣ್ಯಮಿದು ಶೃಂಗಾರ ಕುಸುಮ ತರು ತರುಗಿದಾ।*
*ರಣ್ಯಮಿದು ನವರಸ ಪ್ರೌಢಿ ಲಾಲಿತ್ಯ ನಾನಾ*
*ವಿಚಿತ್ರಾರ್ಥಂಗಳ ॥*
*ಗಣ್ಯಮಿದು ಶಾರದೆಯ ಸಮ್ಮೋಹನಾಂಗ ಲಾ-।*
*ವಣ್ಯವಿದು ಭಾವುಕರ ಕಿವಿದೊಡವಿಗೊದವಿದ ಹಿ-।*
*ರಣ್ಯಮಿದು ಭೂತಳದೊಳೆನೆ ವಿರಾಜಿಪುದು ಲಕ್ಷ್ಮೀಪತಿಯ*
*ಕಾವ್ಯರಚನೆ ॥*

ಕವಿ ಲಕ್ಷ್ಮೀಶನು ತನ್ನ ಕಾವ್ಯವು ಕೃಷ್ಣ ಚರಿತಾಮೃತವೆಂತಲೂ, ಉತ್ತಮ ಕವಿಗಳನ್ನು ಗಣಿಸುತ್ತಾರೆ. ಶೃಂಗಾರವೆಂಬ ಹೂ ಗಿಡಗಳಿಂದ ತುಂಬಿದ ಅರಣ್ಯವೆಂದೂ, ನವರಸ-ಪ್ರೌಢಿ ಇತ್ಯಾದಿ ಗಳಿಂದಲೂ ನಾನಾ ವಿಚಿತ್ರಾರ್ಥಗಳ ಸಮೂಹವೆಂದೂ, ವಿದ್ಯಾಧಿದೇವತೆ ಶಾರದೆಯ ಸಮ್ಮೋಹನಾಂಗದ ಲಾವಣ್ಯವೆಂದೂ, ಭಾವುಕರ ಕಿವಿಯ ಆಭರಣವನ್ನು ಸಿದ್ಧಪಡಿಸಲು ಅವಶ್ಯವಿರುವ ಬಂಗಾರವೆಂದೂ ವರ್ಣಿಸಿ ಈ ಕಾವ್ಯ ರಚನೆಯು ಭೂಮಿಯಲ್ಲಿ ರಾರಾಜಿಸುತ್ತಿದೆಯೆಂದು ಕವಿ ವರ್ಣಿಸುತ್ತಾನೆ. ಇಡಿಯ ಕಾವ್ಯದಲ್ಲಿ ಕವಿ ಶ್ರೀಕೃಷ್ಣನ ಸರ್ವೋತ್ಕೃಷ್ಟತೆಯನ್ನೂ, ಸರ್ವೋತ್ತಮತೆಯನ್ನೂ ಸಾರಿದ್ದಾನೆ.

ರಕ್ತಸಂಬಂಧಿಗಳಾದ ಕೌರವಾದಿಗಳನ್ನೂ, ಗುರುಹಿರಿಯರನ್ನೂ ತಾನು ಯುದ್ಧದಲ್ಲಿ ಕೊಂದುದರಿಂದ ಬಂಧು ಹತ್ಯಾ ದೋಷವು ಬಂತೆಂದು ಚಿಂತಿಸುತ್ತಿದ್ದ ಧರ್ಮರಾಜನು ವೇದವ್ಯಾಸರ ಉಪದೇಶದಿಂದ ಆ ದೋಷದ ಪರಿಹಾರಾರ್ಥವಾಗಿ ಅಶ್ವಮೇಧವನ್ನು ಕೈಗೊಳ್ಳುತ್ತಾನೆ. ಪರ್ಯಾಯವಾಗಿ ತನ್ನನ್ನೇ ನಂಬಿ ಭಜಿಸುತ್ತಿರುವ ಭಕ್ತರನ್ನು ಕಂಡು ಅವರಿಗೆ ದರ್ಶನವನ್ನಿತ್ತು, ಅವರ ಅಭೀಷ್ಟವನ್ನು ನೆರವೇರಿಸುವುದರೊಂದಿಗೆ ಭಾರತ ದೇಶಾದ್ಯಂತ ಪಾಂಡವರನ್ನು ಮೆರೆಯಿಸುವುದು ಶ್ರೀಕೃಷ್ಣನ ಉದ್ದೇಶ. ಹಾಗಾಗಿ ಈ ಅಶ್ವಮೇಧ ಪರ್ವದ ಕತೆಯಲ್ಲಿ ಹಲವು ಮಂದಿ ಕೃಷ್ಣ ಭಕ್ತರ ಕತೆಗಳು ಬರುತ್ತವೆ. ಸುಧನ್ವ, ಬಭ್ರುವಾಹನ, ತಾಮ್ರಧ್ವಜ, ಚಂದ್ರಹಾಸ ಮುಂತಾದ ಹರಿಭಕ್ತರ ಕತೆಗಳಿವೆ. ಕಾಡಿನಲ್ಲಿ ಬೇಟೆಯಾಡುತ್ತಾ ಸಾಗುತ್ತಿದ್ದ ಕುಳಿಂದನೆಂಬ ಬೇಡ ರಾಜನಿಗೆ ಅನಾಥ ಶಿಶುವೊಂದು ದೊರೆತಾಗ ಅವನಿಗಾದ ಸಂತೋಷವನ್ನು ಕವಿ ವರ್ಣಿಸುವ ಪದ್ಯವು ಅವನ ಉಪಮಾ ಪ್ರಿಯತೆಗೆ ಸಾಕ್ಷಿಯಾಗಿದೆ. ಮಾಲೋಪಮೆಯ ಮೂಲಕ ಕವಿ ಹೀಗೆ ವರ್ಣಿಸುತ್ತಾನೆ :-

ಕತ್ತಲೆಯ ಮನೆಗೆ ಮಣಿದೀಪಮಾದಂತೆ ಸಲೆ।
ಬತ್ತಿದ ಸರೋವರಕೆ ನವಜಲಮೊದವಿದಂತೆ।
ಬಿತ್ತರದ ಕಾವ್ಯ ರಚನೆಗೆ ದೇವತಾಸ್ತುತಿ ನೆಗಳ್ದಂತೆ
ಭೂಕಳದೊಳು
ಮತ್ತೆ ಸಂತಾನಮಿಲ್ಲದ ಕುಳಿಂದನ ಬಾಳ್ಕೆ- ।
ಗುತ್ತಮ ಕುಮಾರನಾದಂ ಚಂದ್ರಹಾಸನೆನ-।
ಉತ್ತರೋತ್ತರ ಮಪ್ಪುದಚ್ಚರಿಯೆ ಸುರಪುರದ ಲಕ್ಷ್ಮೀವರನ
ಭಕ್ತರು ॥

ಕವಿಯ ಉಪಮಾಲೋಲ ಎಂಬ ಬಿರುದು ಈ ಮೇಲಿನ ಪದ್ಯದಿಂದ ಸಾರ್ಥಕವಾಗಿದೆ. ಇನ್ನು ನವರಸಗಳ ಹೊಮ್ಮುವಿಕೆಯು ಕಾವ್ಯದ ಎಲ್ಲಾ ಕಡೆಯಲ್ಲೂ ಕಂಡುಬರುತ್ತದೆ. ಸುಧನ್ವ–ಪ್ರಭಾವತಿಯರ ಪ್ರಸಂಗ, ವಿಷಯ–ಚಂಪಕಮಾಲಿನಿಯರ ಜಲ ಕೇಳಿ ಇವುಗಳು 'ಶೃಂಗಾರ' ರಸಕ್ಕೆ ಸಾಕ್ಷಿಯಾದರೆ, ಅಲ್ಲಲ್ಲಿ ಬರುವ ಚಾಟೂಕ್ತಿ, ತಮಾಷೆಗಳು ಹಾಸ್ಯವನ್ನು ಪ್ರತಿಪಾದಿಸುತ್ತವೆ. 'ಸೀತಾ ಪರಿತ್ಯಾಗ' ಪ್ರಸಂಗದಲ್ಲಿ ಕರುಣರಸ ಕೋಡಿ ಹರಿದರೆ, ಯುದ್ಧಗಳ ವರ್ಣನೆ (ಸುಧನ್ವ, ತಾಮ್ರಧ್ವಜ, ಬಭ್ರುವಾಹನ) ವೀರ ಮತ್ತು ರೌದ್ರ ರಸ ಪಾಕಗಳು, ಯುದ್ಧಭೂಮಿಯ ವರ್ಣನೆಯು ಭೀಭತ್ಸ ರಸವನ್ನು ಹೇಳಿದರೆ ಕಾಡಿನಲ್ಲಿ ಚಂದ್ರಹಾಸನು ಕಟುಕರ ವರ್ತನೆಗೆ ಬೆದರುವುದು ಭಯಾನಕವಾಗಿರುತ್ತದೆ. ಋಷಿ ಮುನಿಗಳ ಆಶ್ರಮ ವರ್ಣನೆ ಶಾಂತವಾಗಿದ್ದರೆ, ಸಮುದ್ರ ಅಲ್ಲಿನ ಮೀನು, ಮೊಸಳೆ, ತಿಮಿಂಗಿಲ ಇತ್ಯಾದಿಗಳ ವರ್ಣನೆಯು ಅದ್ಭುತವಾಗಿರುತ್ತದೆ. ಹೀಗೆ ಈ ಎಲ್ಲಾ ವಿಚಾರಗಳಿಂದಾಗಿ ನವರಸ ಪ್ರೌಢಿ ಲಾಲಿತ್ಯ ಎಂದು ಕವಿಯೇ ಹೇಳಿಕೊಂಡಿದ್ದಾನೆ. ಅಂತೆಯೇ ಒಂದೆಡೆಯಲ್ಲಿ 'ಹರಿ' ಎಂಬ ಶಬ್ದಕ್ಕೆ ವಿಷ್ಣು, ಸಿಂಹ, ಕೋತಿ, ನರಿ, ಕುದುರೆ ಹೀಗೆ ಹಲವಾರು ಅರ್ಥಗಳು ಬರುವಂತೆ ವರ್ಣಿಸಿ ತಾನೇ ಹೇಳಿಕೊಂಡಿರುವ 'ನಾನಾ ವಿಚಿತ್ರಾರ್ಥಂಗಳ' ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಂಡಿರುತ್ತಾನೆ. 'ಅಷ್ಟಾದಶ ವರ್ಣನೆ'ಯೆಂಬುದು ಸಾಹಿತ್ಯದಲ್ಲಿ ಪ್ರಮುಖವಾದುದು. ರಾಜ್ಯಭಾರದ ವರ್ಣನೆಯನ್ನು ಧರ್ಮರಾಜನ ಆಡಳಿತದಿಂದಾರಂಭಿಸಿ, ಅಲ್ಲಿಯೇ ಉಭಯಾರ್ಥಗಳ ಪದ ಪ್ರಯೋಗದಿಂದ ನಾನಾರ್ಥಗಳನ್ನೂ (ಕೊಡೆ, ಪೊಡೆ ಇತ್ಯಾದಿ) ಮುಂದುವರಿದು ಯುದ್ಧ ವರ್ಣನೆ, ಸಮುದ್ರದ ವರ್ಣನೆ, ಕಾಡಿನ ವರ್ಣನೆ, ಸ್ತ್ರೀ ಸೌಂದರ್ಯದ ವರ್ಣನೆ, ರತಿಕ್ರೀಡೆಯ (ಸುಧನ್ವ–ಪ್ರಭಾವತಿ) ವರ್ಣನೆ, ವೇಶ್ಯಾವಾಟಿಕೆ (ರತ್ನಪುರಿ)ಯ ವರ್ಣನೆ ಇತ್ಯಾದಿಗಳಿಂದಾಗಿ ಹದಿನೆಂಟು ಬಗೆಯ ವರ್ಣನೆಗಳನ್ನೂ ನಾವು ಕಾಣಬಹುದು. ನಾದ ಲೋಲ ಎಂಬ ಕವಿಯ ಬಿರುದಿನ ಸಾರ್ಥಕತೆಗೆ ಆತನ ಅನುಪ್ರಾಸಗಳು ಯಮಕಗಳು ಉದಾಹರಣೆಯಾಗಿವೆ:–


*ಕಳಕೀರವಾಣಿಯ ಕರ್ಾಳಾಹಿವೇಣಿಯರ್।*
*ಕಳಭಮದ ಯಾನೆಯ ಕರ್ಾಯಜ ನಿಧಾನೆಯರ್।*
*ಕಳ ಧೌತ ಗಾತ್ರೆಯ ಕರ್ಂಜಿದಳ ನೇತ್ರೆರ್ಯಕರ್ಳೆವೆತ್ತ*
*ಕಾಮಿನಿಯರು ॥*
*ಕಳಶ ಕುಚಯುಗಳೆಯರ್ಕನ ಕಮಣಿ ನಿಗಳೆಯರ್।*
*ಕಳಕಳಿಪವದನೆಯರ್ಕುಲಿಶಾಭರದನೆಯರ್।*
*ಕಳೆದುಳಿದ ರನ್ನೆಯರ್ಕಾಂತಿ ಸಂಪನ್ನೆಯರ್ ನಂದನಕ್ಕೆ*
*ನಡೆತಂದರು ॥*

ಈ ಪದ್ಯವು ಅವನ ರಸಿಕತೆಯನ್ನೂ, ಸ್ತ್ರೀ ಸೌಂದರ್ಯದ ವರ್ಣನೆಯ ಔನ್ನತ್ಯವನ್ನೂ, ನಾದಮಯತೆಯನ್ನೂ ಪ್ರತಿಬಿಂಬಿಸುತ್ತದೆ.

ಒಟ್ಟಿನಲ್ಲಿ ಕವಿ ಲಕ್ಷ್ಮೀಶನು ನಡುಗನ್ನಡ ಸಾಹಿತ್ಯ ಪ್ರಪಂಚದ ಒಂದು ಮಿನುಗುವ ತಾರೆ, ಕನ್ನಡಿಗರ ಭಾಗ್ಯದ ಕರಂಡಕದ ಅನರ್ಘ್ಯ ರತ್ನ; ರಸಿಕರ ಕಾವ್ಯರಸಾಸ್ವಾದಕರ ಮಧುರವಾದ ಸರಪಾಕವೆಂಬುದು ನಿಸ್ಸಂದೇಹ.

(ಮುಂದುವರಿಯುವುದು)

PRAMOD
AUTOMOBILES
KARANGALPADY, MANGALORE -575 003.
30 Years of Service
Ph : 2493633 (0)
2493633 (H.O.)
2212723 (R)
Mobile : 9448260225
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR

ಎಮ್. ದೇವಾನಂದ್ ಭಟ್
Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ

ಬೆಳ್ವಾಯಿ-574213
(08258)-276177 (O), (918258)-324133 (O), 276777 (R)
ಎಡಪದವು - 574 164 (0824)-256374 (O) ಮಂಗಳೂರು, ದ.ಕ.

# ಯುರೋಪ್ ಪ್ರವಾಸ ಕಥನ

**ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ**

2009 ನವೆಂಬರ್‌ನಲ್ಲಿ ಥ್ಯಾಲ್ಯಾಂಡ್ ಮಲೇಶಿಯಾ, ಸಿಂಗಾಪೂರ್ ದೇಶಗಳನ್ನು ನೋಡಿದ ಬಳಿಕ ಯುರೋಪ್ ದೇಶಗಳನ್ನು ಒಮ್ಮೆ ಸಂದರ್ಶಿಸುವ ಮನಸ್ಸಾಗಿ ನಿರ್ಮಲಾ ಟ್ರಾವೆಲ್ಸ್‌ನಲ್ಲಿ (ಮುಖ್ಯ ಸಂಸ್ಥೆ-ಮುಂಬೈಯ Vacation Exotica) ಜುಲೈ ತಿಂಗಳ ಪ್ರವಾಸಕ್ಕಾಗಿ ಟಿಕೆಟ್ ಬುಕ್ ಮಾಡಿದೆವು. ಲಂಡನ್, ಜರ್ಮನಿ, ಪ್ಯಾರಿಸ್, ಸ್ವಿಟ್ಜರ್ಲೆಂಡ್, ಇಟಲಿ, ಆಸ್ಟ್ರಿಯಾ, ಬೆಲ್ಜಿಯಂ, ನೆದರ್‌ಲ್ಯಾಂಡ್, ವೆಟಿಕನ್ ಮೊದಲಾದ ಒಂಭತ್ತು ದೇಶಗಳ ಈ ಯುರೋಪ್ ಪ್ರವಾಸವು ಜುಲೈ 18ರಂದು ಬೆಂಗಳೂರಿನಿಂದ ಪ್ರಾರಂಭಗೊಂಡು ಆಗಸ್ಟ್ 1ರಂದು ಬೆಂಗಳೂರಿಗೆ ವಾಪಸ್ ಬಂದು ಕೊನೆಗೊಳ್ಳುವುದಿತ್ತು.

ಜುಲೈ 18ರಂದು ಮುಂಜಾನೆ 4-30ಕ್ಕೆ ಬೆಂಗಳೂರಿನಿಂದ ಹೊರಟ ‘ಎಮಿರೇಟ್’ ಬೋಯಿಂಗ್ ವಿಮಾನದಲ್ಲಿ ನಮ್ಮ ಪ್ರವಾಸವು ಪ್ರಾರಂಭವಾಗಿ ವಿಮಾನವು ದುಬ್ಯಾ ತಲುಪುವಾಗ ಮುಂಜಾನೆ 7-30 ಆಗಿತ್ತು. ದುಬ್ಯಾಯಲ್ಲಿ 10 ಗಂಟೆಗೆ ಬೇರೊಂದು ‘ಎಮಿರೇಟ್’ ಬೋಯಿಂಗ್ ವಿಮಾನವನ್ನು ಹತ್ತಿ ಲಂಡನ್ ನಗರವನ್ನು ಮಧ್ಯಾಹ್ನ 3 ಗಂಟೆಗೆ ತಲುಪಿದೆವು. ಲಂಡನ್ನಿನ ಸಮಯ ಇಲ್ಲಿಯ ಸಮಯಕ್ಕಿಂತ ನಾಲ್ಕುವರೆ ತಾಸು ಹಿಂದಿದೆ. ನಮ್ಮ ಪ್ರವಾಸದಲ್ಲಿ ಒಟ್ಟು 40 ಜನರು ಇದ್ದು ಕರ್ನಾಟಕದಿಂದ 16 ಜನ ಬಂದಿದ್ದರು.

ನಮ್ಮ ಟೂರ್‌ಮೆನೇಜರ್ ರೋಹಿತ್ ನಾಯ್ಡು ಲಂಡನ್ ವಿಮಾನ ನಿಲ್ದಾಣದಲ್ಲಿ ನಮಗಾಗಿ ಕಾಯುತ್ತಿದ್ದು ಅಲ್ಲಿಂದ ಬಸ್ಸಿನಲ್ಲಿ ಹೋಟೇಲಿಗೆ ಹೋಗಿ ಸುಧಾರಿಸಿಕೊಂಡು ಸಂಜೆ ನಾಲ್ಕು ಗಂಟೆಗೆ ಅಲ್ಲಿಯ ಸುಪ್ರಸಿದ್ಧ ಸ್ವಾಮಿ ನಾರಾಯಣ ದೇವಸ್ಥಾನ ನೋಡಲು ಹೋದೆವು. ಈ ದೇವಸ್ಥಾನವು ಇಟಾಲಿಯನ್ ಮಾರ್ಬಲ್‌ನಿಂದ ಕಲಾತ್ಮಕವಾಗಿ ರಚಿಸಲ್ಪಟ್ಟಿದ್ದು ನೋಡಲು ತುಂಬಾ ಸುಂದರವಾಗಿದೆ. ಲಂಡನಿನಲ್ಲಿ ಆಗ ಬೇಸಿಗೆ ಸಮಯವಾದುದರಿಂದ ರಾತ್ರಿ 10 ಗಂಟೆಗೆ ಕತ್ತಲಾಗುತ್ತಿದ್ದು ಬೆಳಿಗ್ಗೆ 4 ಗಂಟೆಗೆ ಬೆಳಕು ಹರಿಯುತ್ತಿತ್ತು. ಹವಾಮಾನವು ಅನಿಶ್ಚಿತವಾಗಿದ್ದು ಆಗಾಗ ಸ್ವಲ್ಪ ಸ್ವಲ್ಪ ಮಳೆ ಬಂದು ಶೀತಗಾಳಿ ಬೀಸುತ್ತಿತ್ತು. ಬಿಸಿಲು ಬೀಳುವುದು ತುಂಬಾ ಕಡಿಮೆ.

ಮರುದಿನ ಬಸ್ಸಿನಲ್ಲಿ ಲೋಕಲ್ ಗೈಡ್ ಜತೆಗೆ ಲಂಡನ್ ನಗರ ವೀಕ್ಷಣೆಗೆ ಕರೆದುಕೊಂಡು ಹೋದರು. ಮೊದಲು ಬಕಿಂಗ್‌ಹ್ಯಾಂ ಅರಮನೆ, ಲಂಡನ್ನಿನ ಅತೀ ಸುಂದರವಾದ ಹೈಡ್ ಪಾರ್ಕ್, ಬಿಗ್ ಬೆನ್, ವೆಸ್ಟ್ ಮಿನ್‌ಸ್ಟರ್ ಅಬೆ, ಪಾರ್ಲಿಮೆಂಟ್ ಹೌಸ್, ಟ್ರಫಾಲ್‌ಗರ್ ಚೌಕ, ಲಂಡನ್ ಬ್ರಿಡ್ಜ್, ಲಂಡನ್ Eye ಸಂದರ್ಶಿಸಿದೆವು. ಬಳಿಕ Madam Tussauds Wax Museumಗೆ ಹೋದೆವು. ಅಲ್ಲಿ ದೇಶ ವಿದೇಶಗಳ ಹಲವಾರು ಪ್ರಸಿದ್ಧ ಮಹನೀಯರ, ಚಲನಚಿತ್ರ ತಾರೆಯರ ಹಾಗೂ ಕ್ರೀಡಾಳುಗಳ ತದ್ರೂಪ ಸುಂದರವಾದ ಮೇಣದ ವಿಗ್ರಹಗಳು ಇವೆ.

ಲಂಡನ್ ನಗರವು ಅತೀ ಪ್ರಾಚೀನ ಹಾಗೂ ವಿಶಾಲವಾದ ನಗರವಾಗಿದ್ದು ಒಂದೆರಡು ದಿನಗಳಲ್ಲಿ ಅದರ ವೀಕ್ಷಣೆ ಅಸಾಧ್ಯ. ಅಲ್ಲಿಯ ಕಟ್ಟಡಗಳೆಲ್ಲವೂ ಅಲ್ಲಿ ದೊರೆಯುವ ಬಿಳಿ ಕಲ್ಲಿನಿಂದ ಹಾಗೂ ಛಾವಣಿ ಹೆಂಚಿನಿಂದ ರಚಿತವಾಗಿದ್ದು, ತುಂಬಾ ಕಲಾತ್ಮಕವೂ, ಸದೃಢವೂ, ಸುಂದರವಾಗಿಯೂ ಇವೆ. ತಾಂತ್ರಿಕವಾಗಿಯೂ, ವೈಜ್ಞಾನಿಕವಾಗಿಯೂ ಇಂಗ್ಲೆಂಡ್ ತುಂಬಾ ಮುಂದುವರಿದ ದೇಶವಾಗಿದೆ. ಭ್ರಷ್ಟಾಚಾರ, ಲಂಚಗುಳಿತನ ತುಂಬಾ ಕಡಿಮೆ.

ಅಲ್ಲಿಯ ಜನರ ಶಿಸ್ತುಬದ್ಧ ಜೀವನ, ವಾಹನ ಸಂಚಾರದ ರೀತಿ, ಸ್ವಚ್ಛ ಹಾಗೂ ಅಗಲವಾದ ರಸ್ತೆಗಳು, ಸುಂದರವಾದ ಕಟ್ಟಡಗಳು, ವಾತಾವರಣದ ಕಲುಷಿತವನ್ನು ಕಡಿಮೆ ಮಾಡಲೆಂದೇ ನೆಟ್ಟ ಸಾಲು ಸಾಲು ಗಿಡಮರಗಳು, ಉದ್ಯಾನವನಗಳು, ನಮ್ಮ ಪ್ರವಾಸಿಗರ ಗಮನ ಸೆಳೆದವು. 2 ದಿನ ಲಂಡನ್ನಿನಲ್ಲಿ ಕಳೆದು ಅಲ್ಲಿಂದ ನೆದರ್‌ಲ್ಯಾಂಡ್‌ಗೆ ಹೊರಟೆವು.

**ನೆದರ್‌ಲ್ಯಾಂಡ್ :** ಲಂಡನ್ನಿನಿಂದ ನಾವು ದೊಡ್ಡ ಹಡಗಿನಲ್ಲಿ ರಾತ್ರಿಯಿಡೀ ಪ್ರಯಾಣ ಮಾಡಿ ನೆದರ್‌ಲ್ಯಾಂಡ್‌ನ ರಾಜಧಾನಿ ‘ಆಮ್‌ಸ್ಟರ್‌ಡಾಂ’ ತಲುಪಿದೆವು. ನೆದರ್‌ಲ್ಯಾಂಡ್‌ನ ಸಿಟಿಟೂರ್‌ನಲ್ಲಿ Wooden Shoe Factory ಹಾಗೂ Cheese Farmಗಳಿಗೆ ಭೇಟಿಕೊಟ್ಟೆವು. ಬಳಿಕ ಅಲ್ಲಿಯ ಕಾಲುವೆಯಲ್ಲಿ ದೊಡ್ಡ ಬೋಟಿನಲ್ಲಿ ಪ್ರಯಾಣಿಸಿ ಇಡೀ ಡಚ್ ಪಟ್ಟಣದ ಸುಂದರ ಸೊಬಗನ್ನು ನೋಡಿದೆವು. ಬಳಿಕ ಅಲ್ಲಿಯ ಪ್ರಸಿದ್ಧ Traditional Windmillನ್ನು ನೋಡಿದೆವು. ಅಲ್ಲಿಂದ Madurodamಗೆ ತೆರಳಿದೆವು. ಅಲ್ಲಿ ನೋಡಿದ Hollandನ ಎಲ್ಲಾ ಪ್ರೇಕ್ಷಣೀಯ ಸ್ಥಳಗಳು, ಕಟ್ಟಡ, ರಸ್ತೆಗಳು, ರೈಲ್ವೆ ಸ್ಟೇಶನ್, ವಿಮಾನ ನಿಲ್ದಾಣ, ಟ್ಯುಲಿಪ್ ಗಾರ್ಡನ್‌ಗಳ 1:25 scaleನಲ್ಲಿ ತಯಾರಿಸಿದ ಮಿನಿಯೇಚರ್ ರಚನೆ ಅತ್ಯಂತ ಸುಂದರ, ಅದ್ಭುತ. ನೆದರ್‌ಲ್ಯಾಂಡ್‌ನಿಂದ ನಮ್ಮ ಮುಂದಿನ ಪ್ರಯಾಣ ಬೆಲ್ಜಿಯಂ ದೇಶಕ್ಕೆ...

**ಬೆಲ್ಜಿಯಂ :** ನೆದರ್‌ಲ್ಯಾಂಡ್ ಸಿಟಿ ಟೂರಿನಲ್ಲಿ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ಬಳಿಕ ಬೆಲ್ಜಿಯಂ ದೇಶದ ರಾಜಧಾನಿ Brussel ತಲುಪಿದೆವು. ಬೆಲ್ಜಿಯಂನ ಸಿಟಿ ಟೂರ್‌ನಲ್ಲಿ ಜಗತ್ತಿನ ಅತೀ ಸುಂದರ ಚೌಕ (Square)ಗಳಲ್ಲಿ ಒಂದಾದ Grand Park Place, Mannekin Pisನ ಪ್ರತಿಮೆ ಹಾಗೂ Brusselನ ಸಂಕೇತವಾದ ಆಕರ್ಷಕವಾದ Atomium, ಅತೀ ಎತ್ತರವಾದ ಕಾರಂಜಿಯನ್ನೂ ವೀಕ್ಷಿಸಿದೆವು. ಬೆಲ್ಜಿಯಂ ಕೂಡಾ ಸ್ವಚ್ಛ, ಸುಂದರ ದೇಶವಾಗಿದೆ.

**ಜರ್ಮನಿ :** ಬೆಲ್ಜಿಯಂ ದೇಶದ ವೀಕ್ಷಣೆಯ ಬಳಿಕ ಜರ್ಮನಿಯ Cologne ಸಿಟಿಗೆ ಪ್ರಯಾಣ ಮಾಡಿದೆವು. ಅಲ್ಲಿ Gothic ವಾಸ್ತುಶಿಲ್ಪ ಶೈಲಿಯಲ್ಲಿ ರಚಿತವಾದ ಅತೀ ಎತ್ತರದ ಪ್ರಾಚೀನ ಇಗರ್ಜಿಯನ್ನು ನೋಡಿದೆವು. ಇಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ವಿನ್ಯಾಸದ ಪ್ರಾಚೀನ ಚರ್ಚ್‌ಗಳಿದ್ದು ಆಕರ್ಷಣೀಯವಾಗಿದೆ. Rhine Valleyಯಲ್ಲಿರುವ ಸುಂದರವಾದ Rhine Falls ನೋಡಿದೆವು. Boppard ಎಂಬ ಸುಂದರವಾದ ಪ್ರದೇಶವನ್ನು Rhine Cruise(ಹಡಗಿ)ನಲ್ಲಿ ಸುಮಾರು ಒಂದೂವರೆ ಗಂಟೆ ಪ್ರಯಾಣ ಮಾಡಿ ವೀಕ್ಷಿಸಿದೆವು. ಹಡಗಿನಲ್ಲಿ ಪ್ರಯಾಣಿಸುವಾಗ ಜರ್ಮನಿಯ ಸುಂದರ ಪ್ರದೇಶಗಳನ್ನು, ದ್ರಾಕ್ಷಿ ತೋಟಗಳಿಂದ ಆವೃತವಾದ ಸುಂದರವಾದ ಪಟ್ಟಣ Heidelbergನ್ನು ನೋಡಿದೆವು. ಹಾಗೆಯೇ ಹಳೆಯ ಕಟ್ಟಡಗಳು ಹಾಗೂ Castles, ಸುಂದರ ಚೌಕವನ್ನು ಹೊಂದಿರುವ Alstadt ಪಟ್ಟಣವನ್ನು ನೋಡಿದೆವು.

ಬಳಿಕ ಜರ್ಮನಿಯ ವಿಸ್ತಾರವಾದ Black Forestನ ಸುಂದರ ಸೊಬಗನ್ನು ನೋಡುತ್ತಾ ಅಲ್ಲಿಯ ಪ್ರಸಿದ್ಧ Cuckoo Clock ಫ್ಯಾಕ್ಟರಿಗೆ ಹೋದೆವು. ಇಲ್ಲಿ ವಿವಿಧ ನಮೂನೆಯ ಗಡಿಯಾರಗಳನ್ನು ಅಲ್ಲಿ ಸಿಗುವ ಮೆದುವಾದ ಮರಗಳ ಫ್ರೇಮಿನಿಂದ ತಯಾರಿಸಿದ್ದು ಅವು ನೋಡಲು ಆಕರ್ಷಕವೂ ದೀರ್ಘಕಾಲ ಬಾಳಿಕೆಯೂ ಬರುತ್ತದೆ. ಈ ಗಡಿಯಾರಗಳು ಉತ್ತಮ ಜರ್ಮನ್ ತಾಂತ್ರಿಕತೆಗೆ ನಿದರ್ಶನವಾಗಿದೆ. ಜರ್ಮನಿಯು ಯುರೋಪಿನ ಶ್ರೀಮಂತ ರಾಷ್ಟ್ರವಾಗಿದ್ದು ಅಲ್ಲಿಯ ವಿಸ್ತಾರವಾದ ಹಾಗೂ ಅಗಲವಾದ ರಸ್ತೆಗಳು, ಭವ್ಯ ಕಟ್ಟಡಗಳು, flyoverಗಳು, ಅಧಿಕ ಸಂಖ್ಯೆಯಲ್ಲಿರುವ ಸುಸಜ್ಜಿತ, ಸ್ವಚ್ಛ ಸುರಂಗ ಮಾರ್ಗಗಳು ಜರ್ಮನಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ.

ಜರ್ಮನಿಯ ಚಾರಿತ್ರಿಕ ಪಟ್ಟಣವಾದ Alstadtನಲ್ಲಿ ಸುತ್ತಾಡಿ ಸುಂದರವಾದ ಕಟ್ಟಡಗಳನ್ನು ವೀಕ್ಷಿಸಿ, ಶಾಪಿಂಗ್ ಮುಗಿಸಿ, ಹೊಟೇಲ್‌ಗೆ ತೆರಳಿದೆವು.

ಇನ್ನು ಮುಂದಿನ ಪ್ರಯಾಣ ಸ್ವಿಟ್ಜರ್ಲೆಂಡ್ ದೇಶಕ್ಕೆ....

(ಮುಂದುವರಿಯುವುದು)






## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2010-11

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2010-11ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2011ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್ ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ‘‘ಸಂಚಾಲಕರು, ಯುವವೇದಿಕೆ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102’’ ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ್‍ಯಾಂಕ್‌ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2011ರ ಒಳಗೆ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ಚರ್ಚ್ ರಸ್ತೆ, ಮಂಗಳೂರು

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ ದಿನಾಂಕ 16-10-2011ರ ಆದಿತ್ಯವಾರದಂದು ದಸರಾ ನಾಡಹಬ್ಬವನ್ನು ಆಚರಿಸಲಾಗುವುದು. ಬೆಳಿಗ್ಗೆ 9-30ರಿಂದ ಲಲಿತ ಸಹಸ್ರನಾಮ ಪಾರಾಯಣ ಮತ್ತು ವಿವಿಧ ಸ್ಪರ್ಧೆಗಳು ನಡೆಯಲಿದೆ ಹಾಗೂ ದಿ। ಕೆ.ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ ಇವರಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ ಭೋಜನದ ನಂತರ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ಸದಸ್ಯರಿಂದ ಯಕ್ಷಗಾನ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಪಿ.ಶ್ರೀಕಾಂತ ರಾವ್, ಮೊಬೈಲ್ : 9343361618, ಶ್ರೀಮತಿ ಅರುಣಾಸೋಮಶೇಖರ್ 2456028 (ನಿವಾಸ) ಮೊಬೈಲ್ : 9880413243


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**


ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ

## ಕಾರ್ಕಳದ ಪ್ರಪ್ರಥಮ ಹಾಗೂ ಏಕಮೇವ ಏ.ಎಲ್.ಟಿ.ಗೈಡರ್ ಸಾವಿತ್ರಿ ಮನೋಹರ್‌ಗೆ ಪ್ರಶಸ್ತಿ ಪ್ರದಾನ



ಇವರನ್ನು ನೋಡಿದರೆ ಅರವತ್ತೆರಡು ವರ್ಷದ ನಿವೃತ್ತ ಶಿಕ್ಷಕಿ ಎಂದು ಹೇಳಲು ಅನುಮಾನ ವಾಗುತ್ತಿದೆ. ಚಿಕ್ಕ ಹುಡುಗಿಯಂತೆ ಬಿಡುವಿಲ್ಲದ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಶ್ರೀಮತಿ ಸಾವಿತ್ರಿ ಮನೋಹರ್ ನಮ್ಮ ಉಡುಪಿ ಜಿಲ್ಲೆಯ ಉತ್ಸಾಹಿ ಗೈಡರ್ ಎಂದು ಹೇಳಿಕೊಳ್ಳಲು ನನಗೆ ತುಂಬಾ ಹೆಮ್ಮೆಯಾಗುತ್ತಿದೆ. ಇವರಿಗೆ ರಾಜ್ಯ ಪ್ರಶಸ್ತಿಯಷ್ಟೆ ಅಲ್ಲ ರಾಷ್ಟ್ರಪ್ರಶಸ್ತಿಯೂ ಎಂದೋ ದೊರೆಕಬೇಕಿತ್ತು. ಅವರೊಬ್ಬ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿದ್ದು, ಗೈಡ್ ಕ್ಯಾಪ್ಟನ್ ಆಗಿಯೂ ಸಲ್ಲಿಸಿದ ಸೇವೆ ಇತರರಿಗೆ ಮಾದರಿಯಾಗಿದೆ ಎಂದು ಕರ್ನಾಟಕ ರಾಜ್ಯ ಸ್ಕೌಟ್ ಗೈಡ್ ಆಯುಕ್ತೆ ಶ್ರೀಮತಿ ಶಾಂತಾ ವಿ.ಎಸ್. ಆಚಾರ್ ನುಡಿದರು.

ಅವರು ಕಾರ್ಕಳ ತಾಲೂಕು ದುರ್ಗಾ ಗ್ರಾಮದ ತೆಳ್ಳಾರು ಶ್ರೀ ಬಿ. ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರೌಢಶಾಲೆಯ ಸ್ಥಾಪಕ ರಾಜ್ಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಗೈಡ್ ಕ್ಯಾಪ್ಟನ್ ಶ್ರೀಮತಿ ಸಾವಿತ್ರಿ ಮನೋಹರ್‌ರವರಿಗೆ ಮಧ್ಯ ಪ್ರದೇಶದ ರಾಷ್ಟ್ರೀಯ ತರಬೇತಿ ಕೇಂದ್ರ ರಾಷ್ಟ್ರೀಯ ಮಟ್ಟದ ತರಬೇತಿದಾರರಿಗೆ ನೀಡುವ ಎ.ಎಲ್.ಟಿ. ಪ್ರಶಸ್ತಿ ಪತ್ರ ನೀಡಿ ಗೌರವಿಸುವ ಸಮಾರಂಭದ ಸಂದರ್ಭದಲ್ಲಿ ಶುಭ ಹಾರೈಸಿದರು. ರಾಜ್ಯ ತರಬೇತಿ ಆಯುಕ್ತೆ ಶ್ರೀಮತಿ ಕೆ.ಕೆ.ಲೀಲಾ ಪದಕ ತೊಡಿಸಿ ಗೌರವಿಸಿದರು.

ಶ್ರೀಮತಿ ಸಾವಿತ್ರಿ ಮನೋಹರ್ ಈ ಹಿಂದೆ 1995ರಲ್ಲಿ ಕಾರ್ಕಳದ ಪ್ರಥಮ, ಏಕೈಕ ಹಿಮಾಲಯ ವುಡ್ ಬ್ಯಾಡ್ಜ್ ಪದಕ ಪಡೆದ ಗೈಡ್ ಕ್ಯಾಪ್ಟನ್ ಹಿರಿಮೆಗೆ ಪಾತ್ರರಾಗಿದ್ದರು. 2008ರಲ್ಲಿ ಪ್ರಿ.ಎ.ಎಲ್.ಟಿ. ಮತ್ತು ಎ.ಎಲ್.ಟಿ.ಗಾಗಿ ಮಧ್ಯಪ್ರದೇಶದ ಪಚಮುಡಿಯಲ್ಲಿ ತರಬೇತಿ ಪಡೆದಿದ್ದರು. ಇದೀಗ ಕಾರ್ಕಳ ತಾಲೂಕಿನ ಸ್ಕೌಟ್ ಗೈಡ್ ಸಂಸ್ಥೆಯ ಏಕಮೇವ ಪ್ರಥಮ ಗೈಡ್ ಕ್ಯಾಪ್ಟನ್ ಸಾವಿತ್ರಿ ಮನೋಹರ್‌ರವರನ್ನು ಕಾರ್ಕಳ ಶ್ರೀಮದ್ ಭುವನೇಂದ್ರ ಪ್ರೌಢಶಾಲೆಯಲ್ಲಿ ನಡೆದ ತಾಲೂಕು ಸಂಸ್ಥೆ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ಎಂ.ಕೆ.ವಿಜಯ ಕುಮಾರ್ ಹಾಗೂ ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮೀಷನರ್ ಶ್ರೀ ಶ್ರೀಧರ ಆಚಾರ್ ಅಭಿನಂದಿಸಿದರು.

## ಕಾರ್ಕಳ ಮಹಿಳಾಮಂಡಳಿಯ ಅಧ್ಯಕ್ಷರಾಗಿ ಶ್ರೀಮತಿ ಸಾವಿತ್ರಿ ಮನೋಹರ್

ಶ್ರೀಶಾರದಾ ಮಹಿಳಾ ಮಂಡಳಿ (ರಿ.), ಅನಂತಶಯನ, ಕಾರ್ಕಳ ಇದರ 2011–2013ರ ವರೆಗಿನ ಎರಡು ವರ್ಷಗಳ ಅವಧಿಗೆ ಅಧ್ಯಕ್ಷೆಯಾಗಿ ಶ್ರೀಮತಿ ಸಾವಿತ್ರಿ ಮನೋಹರ್ ಅವಿರೋಧವಾಗಿ ಪುನಃರಾಯ್ಕೆಗೊಂಡಿರುತ್ತಾರೆ. ಉಪಾಧ್ಯಕ್ಷೆಯಾಗಿ ಶ್ರೀಮತಿ ಭಾರತಿ ಪಿ.ಕೆ., ಕೋಶಾಧಿಕಾರಿಯಾಗಿ ಶ್ರೀಮತಿ ಭಾರತಿ ಕುಲಕರ್ಣಿ, ಕಾರ್ಯದರ್ಶಿಯಾಗಿ ಶ್ರೀಮತಿ ಶಶಿಕಲ ಗೌಡ, ಜೊತೆ ಕಾರ್ಯದರ್ಶಿಯಾಗಿ ಶ್ರೀಮತಿ ಉಮಾ ಚಿಪ್ಳಾಣಕರ್ ಆಯ್ಕೆಗೊಂಡರು. ಕ್ರೀಡಾ ಕಾರ್ಯದರ್ಶಿಗಳಾಗಿ ಶ್ರೀಮತಿಯರಾದ ಶಾಂತಲ ಪಾಠಕ್, ಸುಧಾ ಎಸ್.ರಾವ್ ಮತ್ತು ವಿನಯಾ ಪಾಠಕ್ ಆಯ್ಕೆಯಾದರು. ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ಶ್ರೀಮತಿಯವರಾದ ವನಜಾ ವಿ.ರಾವ್, ಶಾರ್ವರಿ ಉಪಾಧ್ಯಾಯ ಹಾಗೂ ಸಹನಾ ಹೆಗ್ಡೆ ಆಯ್ಕೆಗೊಂಡರು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶ್ರೀಮತಿಯರಾದ ಜ್ಯೋತ್ಸ್ನಾ ರಾವ್, ಪ್ರಭಾವತಿ ರಾವ್, ಜಯಂತಿ ಆನಂದ್, ಜಯಲಕ್ಷ್ಮಿ, ವಿಜಯಾ ಆಚಾರ್, ಶಶಿಕಲಾ ವಿ.ಆರ್., ಜಯಂತಿ ಎಸ್., ಶೈಲಜ ವೆಂಕಟೇಶ ಮೂರ್ತಿ, ವಸಂತಿ ರಾವ್ ಹಾಗೂ ಶೈಲಜಾ ರತ್ನಾಕರ್ ಆಯ್ಕೆಗೊಂಡರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರತಿಭಾ ಪುರಸ್ಕಾರ




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ಚರ್ಚು ರಸ್ತೆ, ಮಂಗಳೂರು ಇಲ್ಲಿ ತಾ.07-08-2011ರ ಆದಿತ್ಯವಾರದಂದು ನಡೆದ 'ಆಟಿತೊ ಆಟ ಕೂಟ' ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು. ಕಳೆದ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದು ಅಪ್ರತಿಮ ಸಾಧನೆ ಮಾಡಿದ ಅನುಜ್ಞಾ ಕೆ. ಮತ್ತು ಸ್ನೇಹಾ ರಾವ್ ಹಾಗೂ ಸಿ.ಬಿ.ಎಸ್.ಇ.ಯ ಹತ್ತನೇ ತರಗತಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ 10ರಲ್ಲಿ 10 ಸ್ಥಾನ ಗಳಿಸಿದ ಪವಿತ್ರಾ ವಿ. ರಾವ್ ಮತ್ತು ವಿಶ್ವಜೇತ್ ರಾವ್ ಮತ್ತು ಲಯನೆಸ್ ಸಂಸ್ಥೆಯ ಅಂತಾರಾಜ್ಯ ಸ್ಪರ್ಧೆಯಲ್ಲಿ ಛದ್ಮವೇಷ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಶ್ರೀಮತಿ ಜ್ಞಾನೇಶ್ವರಿ ಜೋಷಿ ಮತ್ತು ನೃತ್ಯಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದ ಶ್ರೀಮತಿ ಅನುರಾಧ ಕೆ.ರಾವ್‌ರನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ವರದಿ : **ಪಿ. ಶ್ರೀಕಾಂತರಾವ್, ಮೊಬೈಲ್ : 9343361618**

## ಡಾ। ಪ್ರಶಾಂತ ಎ.ಎಸ್. ಇವರಿಗೆ ಅಷ್ಟವೈದ್ಯನ್ ಇ.ಟಿ.ನೀಲಕಂಠನ್ ಮೂಸ್ ಪಾರಿತೋಷಕ ಹಾಗೂ ಪುರಸ್ಕಾರ



ಪ್ರತಿಷ್ಠಿತ ಆಯುರ್ವೇದ ಸಂಸ್ಥೆಯಾದ ಕೇರಳದ ವೈದ್ಯರತ್ನಂ ಔಷಧ ಶಾಲಾ, ತ್ರಿಶೂರ್ ಇವರಿಂದ ಅಖಿಲ ಭಾರತ ಮಟ್ಟದಲ್ಲಿ ಆಯುರ್ವೇದ ಕ್ಷೇತ್ರದಲ್ಲಿ ನಡೆಯುವ ಸಂಶೋಧನಾತ್ಮಕ ವಿಷಯಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ.

2011ನೇ ಸಾಲಿನಲ್ಲಿ ''ರಕ್ತದಲ್ಲಿ ಯುರಿಕ್ ಆ್ಯಸಿಡ್ ಹೆಚ್ಚಳದಿಂದ ಉಂಟಾಗುವ ಗೌಟ್ ರೋಗಸಂಬಂಧಿತ ಸಂಧುವಾತ (ವಾತರಕ್ತ ರೋಗ)ಕ್ಕೆ ಆಯುರ್ವೇದ ಚಿಕಿತ್ಸೆ'' ಎಂಬ ವಿಷಯದ ಸಂಶೋಧನಾತ್ಮಕ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದ ಕುರಿತು ಹುಬ್ಬಳ್ಳಿ ಆಯುರ್ವೇದ ಮಹಾವಿದ್ಯಾಲಯದ ಪ್ರಾಧ್ಯಾಪಕ ರಾದ ಡಾ। ಪ್ರಶಾಂತ ಎ.ಎಸ್. ಇವರಿಗೆ ಅಷ್ಟವೈದ್ಯನ್ ಇ.ಟಿ.ನೀಲಕಂಠನ್ ಮೂಸ್ ಪಾರಿತೋಷಕ ಹಾಗೂ ಪುರಸ್ಕಾರ ಲಭಿಸಿದೆ.

ಡಾ। ಪ್ರಶಾಂತ್ ಎ.ಎಸ್. ಇವರಿಗೆ ಸಿಕ್ಕಿದ ಪುರಸ್ಕಾರಕ್ಕೆ ಹುಬ್ಬಳ್ಳಿ ಆಯುರ್ವೇದ ಸೇವಾ ಸಮಿತಿಯ ಕಾರ್ಯಕಾರಿ ಮಂಡಳಿ, ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯರು, ಶಿಕ್ಷಕ ವೃಂದ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದವು ಅಭಿನಂದನೆಯನ್ನು ಸಲ್ಲಿಸಿದೆ.

ವರದಿ : **ಎಸ್.ಜೆ.ದೇಶಪಾಂಡೆ**

## ಪ್ರತಿಭಾನ್ವಿತೆಗೆ ವಿಪ್ರ ಸನ್ಮಾನ

''ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಯಾವುದೇ ಕ್ಷೇತ್ರವಿರಲಿ ಅಲ್ಲಿ ಕೇಳಿ ಬರುವ ಮೊದಲ ಹೆಸರು ಸಾವಿತ್ರಿ ಮನೋಹರ್. ಇವರೊಬ್ಬ ಬಹುಮುಖ ಪ್ರತಿಭಾನ್ವಿತೆ. ಇವರು ಭಾಷಣಕ್ಕೆ ಬರ್ತಾರೆ ಅಂದೆ ಅದೊಂದು ಸಂತಸದ ಸುಗ್ಗಿ. ಸಾಮಾನ್ಯರಿಂದ ವಿದ್ವಜನರವರೆಗೆ ಎಲ್ಲರಿಗೂ ಹಿತವಾಗುವಂತೆ, ಸಂದರ್ಭಕ್ಕೆ ಹೊಂದುವಂತೆ ಮಾತನಾಡುವ ಕಲೆ ಕರಗತ ಮಾಡಿಕೊಂಡ ಕೆಲವರಲ್ಲಿ ಇವರೊಬ್ಬರು. ಇವರನ್ನು ಸನ್ಮಾನಿಸುವುದರ ಮೂಲಕ ಈ ನಮ್ಮ ತಾಲೂಕು ಬ್ರಾಹ್ಮಣ ಸಂಘ ಕೃತಾರ್ಥವಾಗಿದೆ'' ಎಂದು ಕಾರ್ಕಳ ತಾಲೂಕು ಬ್ರಾಹ್ಮಣ ಸಭಾದ ಗೌರವಾಧ್ಯಕ್ಷ ಶ್ರೀ ರಾಘವೇಂದ್ರ ಆಚಾರ್ ನುಡಿದರು.

ಅವರು ಸಂಘದ ರಜತ ಮಹೋತ್ಸವದ ಸವಿನೆನಪಿನ 'ರಜತ ಸೌರಭ' ಬಿಡುಗಡೆ ಸಮಾರಂಭದಲ್ಲಿ ಸ್ಮರಣ ಸಂಚಿಕೆಯ ಪ್ರಧಾನ ಸಂಪಾದಕರಾಗಿ ಶ್ರಮಿಸಿ, ಉತ್ತಮ ಕೃತಿ ರಚಿಸಿದ ಶ್ರೀಮತಿ ಸಾವಿತ್ರಿ ಮನೋಹರ್‌ರವರನ್ನು ಸನ್ಮಾನಿಸಿ, ಪ್ರಶಂಸೆಯ ನುಡಿ ನುಡಿದರು. ಸಂಘದ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಅದ್ದೂರಿಯ ವರಮಹಾಲಕ್ಷ್ಮೀ ಪೂಜೆ


ಯಾವುದೇ ಪೂಜೆಯನ್ನು ಒಬ್ಬೊಬ್ಬರೇ ಮಾಡುವುದಕ್ಕಿಂತ ಸಾಮೂಹಿಕವಾಗಿ ಮಾಡುವುದರಿಂದ ಆ ಪೂಜೆ ಪ್ರಾರ್ಥನೆಗಳು ದೇವರಿಗೆ ಹೆಚ್ಚು ಪ್ರಿಯವಾಗುತ್ತದೆ. ಅದರಲ್ಲೂ ವರಮಹಾಲಕ್ಷ್ಮಿ ಇಂತಹ ಸಾಮೂಹಿಕ ಭಜನೆ, ಪೂಜೆಗಳಿಂದ ದೇವಿಯು ಸಂತುಷ್ಟಳಾಗಿ ಬೇಡಿದ ವರ ನೀಡುತ್ತಾಳೆ ಎಂದು ಡಾ। ನಿರಂಜನ ಭಟ್‌ರವರು ತಿಳಿಸಿದರು.

ಅವರು ಶಂಕರ ಪ್ರತಿಷ್ಠಾನ ಕಾರ್ಕಳದ ಮಹಿಳಾ ವಿಭಾಗದವರು ನಡೆಸಿಕೊಟ್ಟ ಸಾಮೂಹಿಕ ವರಮಹಾಲಕ್ಷ್ಮಿ ಪೂಜೆಯ ಮಹಾತ್ಮೆಯನ್ನು ವಿವರಿಸುತ್ತಿದ್ದರು. ತಾ.12-8-2011ರ ಬೆಳಿಗ್ಗೆ 7 ಗಂಟೆಗೆ ಆರಂಭವಾದ ಪೂಜೆ ಲಕ್ಷ್ಮೀ ಸಹಸ್ರನಾಮಾವಳಿ ಪಠಣ, ಕುಂಕುಮಾರ್ಚನೆ ಮತ್ತು ಭಜನೆಯೊಂದಿಗೆ 10 ಗಂಟೆಗೆ ಮುಕ್ತಾಯವಾಯಿತು. ಪೂಜೆಯ ಪ್ರಾಯೋಜಕತ್ವವನ್ನು ಪ್ರಸಾದ ಭವನದ ಶ್ರೀ ಭವಾನಿ ಶಂಕರ ರಾವ್ ಮತ್ತು ಶ್ರೀಮತಿ ಸೌಮ್ಯಭವಾನಿ ಎಸ್.ರಾವ್ ವಹಿಸಿದ್ದರು. ಪ್ರತಿಷ್ಠಾನದ ವತಿಯಿಂದ ಉಪಹಾರ ವ್ಯವಸ್ಥೆ ಮತ್ತು ಧನ್ಯವಾದ ಸಮರ್ಪಣೆ ನಡೆಯಿತು.

## ಖ್ಯಾತ ತಬಲಾ ವಾದಕ ರಾಘವೇಂದ್ರ ಪ್ರಸಾದ ಆಕಸ್ಮಿಕ ಮರಣ

ಅವಿಭಜಿತ ದ.ಕ. ಜಿಲ್ಲೆಯ ಖ್ಯಾತ ತಬಲಾ ವಾದಕ ತಾ.14-8-2011ರಂದು ಆಕಸ್ಮಿಕ ಮರಣಕ್ಕೆ ತುತ್ತಾದರು. ಅವರು ಕಾರ್ಕಳದ ಪ್ರಸಿದ್ಧ ಚಾರ್ಟರ್ಡ್ ಅಕೌಂಟೆಂಟ್‌ಗಳಲ್ಲಿ ಒಬ್ಬರಾಗಿದ್ದುದಲ್ಲದೆ ಶಾಸ್ತ್ರೀಯ ಸಂಗೀತ ಸಭಾ, ಸಾಹಿತ್ಯ ಸಂಘದ ಕ್ರಿಯಾಶೀಲ ಸದಸ್ಯರಾಗಿದ್ದು ಜನಪ್ರಿಯರಾಗಿದ್ದರು. ಅವರು ಕಾರ್ಕಳದ ಪೆರ್ವಾಜೆ ಶ್ರೀ ಆನಂದರಾಯ ಮತ್ತು ಶ್ರೀಮತಿ ರಮಾದೇವಿಯರ ಪುತ್ರರಾಗಿದ್ದರು. ಅವರು ವಯೋವೃದ್ಧ ಮಾತಾಪಿತರನ್ನೂ, ಮೂವರು ಸಹೋದರರನ್ನೂ, ಪತ್ನಿ ನಿರ್ಮಲಾರನ್ನಲ್ಲದೆ ಅಪಾರ ಬಂಧು ಬಳಗವನ್ನಗಲಿದ್ದಾರೆ.

ವರದಿ : **ಸಾವಿತ್ರಿ ಮನೋಹರ್**



## ಕು। ಅಕ್ಷತಾ



ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿರುವ 2011ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕು। ಅಕ್ಷತಾ 573 (91.68%) ಅಂಕಗಳನ್ನು ಪಡೆದು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯನ್ನು ಹೊಂದಿರುತ್ತಾಳೆ. ಈಕೆ ವಿದ್ಯಾಮಂದಿರ ಇಂಗ್ಲೀಷ್ ಮೀಡಿಯಂ ಹೈಯರ್ ಪ್ರೈಮರಿ ಸ್ಕೂಲ್, ಪಡುಬಿದ್ರಿಯ ವಿದ್ಯಾರ್ಥಿನಿ ಹಾಗೂ ಪಡುಬಿದ್ರಿಯ ಶ್ರೀ ಪಿ.ಶಿವಪ್ರಸಾದ್ ರಾವ್ ಮತ್ತು ಶ್ರೀಮತಿ ಗೀತಾರವರ ಪುತ್ರಿ ಇವಳ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ನಿಧನ

### ಕುಕ್ಕಿಕಟ್ಟೆ ಶ್ರೀ ಶ್ರೀನಿವಾಸ ರಾವ್

ಗದಗದಲ್ಲಿ ವಾಸವ್ಯವಿದ್ದ ಕುಕ್ಕಿಕಟ್ಟೆ ಶ್ರೀ ಶ್ರೀನಿವಾಸರಾವ್ (80 ವರ್ಷ) ಇವರು ತಾ.12-8-2011ರಂದು ಗದಗದಲ್ಲಿ ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಶ್ರೀ ಬಿ.ವಿ.ಭೀಮರಾವ್

ಬೆಂಗಳೂರಿನಲ್ಲಿ ವಾಸ್ತವ್ಯವಿರುವ ದಿ। ಬಿ. ವಾಸುದೇವರಾಯರ ಪುತ್ರ ಶ್ರೀ ಬಿ.ವಿ. ಭೀಮರಾವ್ (90) ಇವರು ತಾ.23-08-2011 ರಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಶ್ರೀಮತಿ ವಸುಂಧರಾ ದೇವಿ

ಬೆಳ್ಮಣ್ಣು ದಿ। ನಾರಾಯಣ ರಾಯರ ಪುತ್ರ, ಭವಾನಿಶಂಕರರ ಧರ್ಮಪತ್ನಿ ವಸುಂಧರಾ ದೇವಿ (60 ವರ್ಷ) ಇವರು ತಾ.12-8-2011ರಂದು ಮಹಾರಾಷ್ಟ್ರದ ದಹಿವಾಡಿಯಲ್ಲಿ ನಿಧನರಾದರು. ಮೃತರು ಪತಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

## ವಿಳಾಸ ಬದಲಾವಣೆ

K. Athmarama Shastry
1922/2, 2nd Cross,
11th Main Road, A Block,
2nd Stage, Rajaji Nagar,
Bangalore-10

★★★★

Dr.Vaman Shanbhogue
Ground Floor, No.93, 4th Cross,
2nd Block, Koramangala,
Bangalore-34

## ಕನ್ಯಾ ಮಾಸ ವಿಶೇಷ ದಿನಗಳು

| | |
|---|---|
| 17-09-2011 | ಕನ್ಯಾ ಸಂಕ್ರಮಣ |
| 23-09-2011 | ಸ್ಮಾರ್ತೈಕಾದಶೀ |
| 24-09-2011 | ಭಾಗವತೈಕಾದಶೀ |
| 25-09-2011 | ಪ್ರದೋಷ, |
| 27-09-2011 | ಸರ್ವಪಿತ್ರ ಅಮಾವಾಸ್ಯಾ, ಹಸ್ತಾ ನಕ್ಷತ್ರಾರಂಭ |
| 28-09-2011 | ನವರಾತ್ರಿ ಆರಂಭ |
| 01-10-2011 | ಲಲಿತ ಪಂಚಮಿ |
| 03-10-2011 | ಶಾರದಾ ಪೂಜಾರಂಭ |
| 05-10-2011 | ಮಹಾನವಮಿ |
| 06-10-2011 | ವಿಜಯದಶಮಿ |
| 07-10-2011 | ಸರ್ವೈಕಾದಶೀ |
| 09-10-2011 | ಪ್ರದೋಷ, |
| 10-10-2011 | ಚಿತ್ರಾ ನಕ್ಷತ್ರಾರಂಭ |
| 12-10-2011 | ಹುಣ್ಣಿಮೆ |
| 15-10-2011 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ ಘಂಟೆ 9-36 |
| 17-10-2011 | ತುಲಾ ಸಂಕ್ರಮಣ |

## ಅಭಿನಂದನೆ

### ಕು। ಅಂಕಿತಾ ಭಂಡಿ



ಕರ್ನಾಟಕ ಪ್ರೌಢ ಶಾಲಾ ಶಿಕ್ಷಣ ಮಂಡಳಿ ನಡೆಸಿರುವ 2011-12 ಸಾಲಿನ ಕರ್ನಾಟಕ ಜೂನಿಯರ್ ಗ್ರೇಡ್ ಸಂಗೀತ ಪರೀಕ್ಷೆಯಲ್ಲಿ ಕು। ಅಂಕಿತ ಭಂಡಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ರುತ್ತಾಳೆ. ಇವಳು ಹೆಬ್ರಿಯ ಎಸ್.ಆರ್. ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಯಾಗಿದ್ದು, ಪೆರ್ಡೂರಿನ ಗಣೇಶ ಭಂಡಿ ಹಾಗೂ ಆಶಾ ಗಣೇಶ್ ಭಂಡಿಯವರ ಪುತ್ರಿ. ಇವಳು ಸಂಗೀತಾಭ್ಯಾಸವನ್ನು ಪೆರ್ಡೂರಿನ ಶ್ರೀಮತಿ ಉಷಾಅನಂತ ಹೆಬ್ಬಾರ್ ಅವರ ಬಳಿ ಮಾಡುತಿದ್ದಾಳೆ. ಇವಳ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಹರಿಪ್ರಸಾದ್ ಎಸ್.ರಾವ್.



ಈ ಬಾರಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮುನಿಯಾಲಿನ ಸರಕಾರಿ ಜ್ಯೂನಿಯರ್ ಕಾಲೇಜಿನ ವಿದ್ಯಾರ್ಥಿ ಹರಿಪ್ರಸಾದ್ ಎಸ್.ರಾವ್ 584 ಅಂಕಗಳನ್ನು (93.44%) ಪಡೆದು ವಿಶೇಷ ಶ್ರೇಣಿಯಲ್ಲಿ ಪಾಸಾಗಿರುತ್ತಾನೆ. ಇವನು ಅಜೆಕಾರು ಕಾಡುಹೊಳೆಯಲ್ಲಿರುವ ಅಧ್ಯಾಪಕ ದಂಪತಿಗಳಾದ ಶ್ರೀ ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ನಾಗವಲ್ಲಿ ಇವರ ಪುತ್ರ. ಇವನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕು। ಮಾನಸ ರಾವ್



ಕರ್ನಾಟಕ ಪ್ರೌಢ ಶಾಲಾ ಶಿಕ್ಷಣ ಮಂಡಳಿಯವರು ನಡೆಸಿರುವ ಜೂನ್ 2011ರ ಸಾಲಿನ ಕರ್ನಾಟಕ ಸಂಗೀತ ಜ್ಯೂನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಕು। ಮಾನಸ ರಾವ್ 91% ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾಳೆ. ಇವಳು ಮಣಿಪಾಲದ ಸರಿಗಮ ಸಂಗೀತ ಶಾಲೆಯ ಸಂಗೀತ ವಿದುಷಿ ಶ್ರೀಮತಿ ಉಮಾಶಂಕರಿ ಉದಯಶಂಕರ್‌ರವರ ಶಿಷ್ಯೆ. ಹಾಗೂ ನಮ್ಮ ಸಂಘದ ಕೋಶಾಧಿಕಾರಿಗಳಾದ ಡಾ। ವೈ. ಸುದರ್ಶನ ರಾವ್ ಮತ್ತು ವಿದ್ಯಾ ರಾವ್ ದಂಪತಿಗಳ ಪುತ್ರಿ. ಪ್ರಸ್ತುತ ಉಡುಪಿ ವಿದ್ಯೋದಯ ಪಬ್ಲಿಕ್ ಸ್ಕೂಲ್‌ನಲ್ಲಿ ಏಳನೆಯ ತರಗತಿ ಕಲಿಯುತಿದ್ದಾಳೆ. ಈಗಾಗಲೇ ಸಂಗೀತದಲ್ಲಿ ಜಿಲ್ಲಾ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳಿಸಿರುವ ಈಕೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

ಕವನ

## ವಿನಾಯಕ ನಿನಗೊಂದು-ಮನವಿ

ವಿನಾಯಕ ನಿನಗೊಂದು ವರುಷದ ಮನವಿ
ಹೇಳಿಬಿಡುವೆ ಅಗಲಿಸು ನಿನ್ನ ಕಿವಿ
ತಾತ್ಸಾರ ಮಾಡದೆ ಗಮನವಿರಿಸಿ
ಏನು ಹೇಳುತ್ತಾನೆಂದು ಕೇಳು ಈ ಕವಿ

ಮೊದಲಿಗೆ ನಿನ್ನ ವರುಷದ ಆಗಮನ
ನಮಗೆಲ್ಲ ತಂದಿದೆ ಉಲ್ಲಾಸ
ವಸ್ತುಗಳ ಧಾರಣೆ ಗಗನಕ್ಕೆತ್ತರ ಏರಿದೆ
ಆದರೂ ಕಳೆದುಕೊಂಡಿಲ್ಲ ಉತ್ಸಾಹ

ವರುಷದಲ್ಲಿ ಜಗದಲ್ಲಾಗಿದೆ ಅವಘಡ
ಪ್ರವಾಹ ಸುನಾಮಿ ಅಪಘಾತ
ಸಾವಿರಾರು ಸಾವು ಕೋಟ್ಯಾಂತರ ಧನಹಾನಿ
ಸುಧಾರಿಸಲು ಆಗದ ಆಘಾತ

ವರುಷ ವರುಷದಲ್ಲಿ ಹೆಚ್ಚುತ್ತಿದೆ
ಭಯೋತ್ಪಾದಕರ ಅಟ್ಟಹಾಸ
ಕಡಿವಾಣ ಹಾಕಲು ನಿನಗೇಕೆ ಸಾಧ್ಯವಿಲ್ಲ
ಮನಸ್ಸು ಮಾಡಬೇಕು ನೀನು ಗಣೇಶ

ಭ್ರಷ್ಟಾಚಾರ ರಹಿತ ಸುಖೀ ರಾಜ್ಯಕ್ಕಾಗಿ
ಕೋಟಿ ಕೋಟಿ ಮನಗಳ ಕಾತರ
ಈ ವರುಷ ಬುವಿಗೆ ಬಂದಾಗ ನೀನು
ಎಲ್ಲ ಸರಿಪಡಿಸುವೆಯಾ ಲಂಬೋದರ

**- ಮಾರ್ಪಳ್ಳಿ ಆರ್.ಮಂಜುನಾಥ್, ಶಿವಮೊಗ್ಗ**

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ: ಸ್ಪೊಂಡಿಲೋಸಿಸ್ (sponylosis) ಎಂದರೇನು? ಈ ಕಾಯಿಲೆ ಬರಲು ಕಾರಣಗಳೇನು ಮತ್ತು ಅದರ ಚಿಕಿತ್ಸೆ ಏನು?**

**ಉತ್ತರ:** ಮನುಷ್ಯನ ಬೆನ್ನೆಲುಬು ಅವನ ಅಸ್ಥಿಪಂಜರದೊಳಗೇ ಒಂದು ವಿಶಿಷ್ಟವಾದ ರಚನೆಯಾಗಿದೆ. ಬೆನ್ನೆಲುಬು ತಲೆಬುರುಡೆಯ ತಳಭಾಗದಿಂದ ಆರಂಭಗೊಂಡು ಕುತ್ತಿಗೆ, ಬೆನ್ನು, ಸೊಂಟಗಳ ಮಧ್ಯದಲ್ಲಿ ಹಾದು ಹೋಗಿ ಮಲದ್ವಾರಕ್ಕಿಂತ ಸ್ವಲ್ಪ ಮೊದಲು ಕೊನೆಗೊಳ್ಳುತ್ತದೆ. ಈ ಬೆನ್ನೆಲುಬು ಕುತ್ತಿಗೆ, ಹೊಟ್ಟೆ ಮತ್ತು ಎದೆಗೆ ಒಂದು ಆಕಾರವನ್ನು ಒದಗಿಸುವುದಲ್ಲದೆ ಅವಕ್ಕೆ ಒಂದು ಆಧಾರ ಸ್ಥಂಭದಂತೆಯೂ ಸಹಾಯ ಮಾಡುತ್ತದೆ. ಆದರೆ ಇದು ಒಂದು ಕಂಬದಂತೆ ಪೆಡಸಾಗಿರದೆ ಬೆನ್ನೆಲುಬಿನ ಯಾವ ಭಾಗವನ್ನು ಬೇಕಾದರೂ ಮುಂದೆ ಬಗ್ಗಿಸಬಹುದು. ಹಿಂದೆ ವಾಲಿಸಬಹುದು. ಹಾಗೂ ಬದಿಗಳಿಗೆ ತಿರುಗಿಸಬಹುದಾಗುವಂತೆ ಅದರ ರಚನೆ ಇದೆ. ಬೆನ್ನೆಲುಬಿನ ಇಷ್ಟೊಂದು ಚಲನೆಗೆ ಕಾರಣವೇನೆಂದರೆ ಅದು ಒಂದೇ ಎಲುಬಿನಿಂದ ಮಾಡಿರದೆ ಕಶೇರುಕ ಮಣಿಗಳೆಂದು ಕರೆಯಲ್ಪಡುವ ಒಟ್ಟು 33 ಎಲುಬುಗಳಿಂದ ಮಾಡಲ್ಪಟ್ಟಿರುವುದು. ಬೆನ್ನೆಲುಬಿನ ರಚನೆಯನ್ನು ಕಶೇರುಕ ಮಣಿಗಳನ್ನು ಇಟ್ಟಿಗೆಯಂತೆ ಒಂದರ ಮೇಲೊಂದರ ಮೇಲೆ ಪೇರಿಸಿಟ್ಟಂತೆ ಊಹಿಸಿಕೊಳ್ಳಬಹುದು. ಎರಡು ಕಶೇರುಕ ಮಣಿಗಳನ್ನು ಡಿಸ್ಕ್ (disc) ಎಂಬ ಮೆದುವಾದ ಅಂಗಾಂಶವು ಒಟ್ಟಿಗೆ ಹಿಡಿದಿಡುತ್ತದೆ. ಕಶೇರುಕಮಣಿಯ ಮಧ್ಯಭಾಗವು ಟೊಳ್ಳಾಗಿದ್ದು, ಬೆನ್ನೆಲುಬನ್ನು ಉದ್ದಕ್ಕೆ ಸೀಳಿ ನೋಡಿದಾಗ ಎಲ್ಲಾ ಕಶೇರುಕ ಮಣಿಗಳ ಟೊಳ್ಳು ಸೇರಿಕೊಂಡು ಒಂದು ಎಲುಬಿನಿಂದ ಮಾಡಿದ ನಳಿಕೆಯಂತಹ ರಚನೆಯಂತೆ ಕಾಣುತ್ತದೆ. ಈ ನಳಿಕೆಯಲ್ಲಿ ತಲೆಬುರುಡೆಯಲ್ಲಿರುವ ಮೆದುಳಿನಿಂದ ಇಳಿದ ಮೆದುಳು ಬಳ್ಳಿಯು ಸಂರಕ್ಷಿಸಲ್ಪಟ್ಟಿದೆ. ಮೆದುಳಬಳ್ಳಿಯಿಂದ ದೇಹದ ಅಂಗಗಳಿಗೆ ಹೋಗಬೇಕಾದ ನರಗಳು ಎರಡು ಕಶೇರುಕ ಮಣಿಗಳ ಮಧ್ಯೆ ಇರುವ ಸಣ್ಣ ತೂತಿನ ಮೂಲಕ ಹೊರಬಂದು ದೇಹದ ಎಲ್ಲಾ ಅಂಗಳ ಕಡೆಗೆ ಹೋಗುತ್ತವೆ. ಈ ನರಗಳ ಮೂಲಕ ಕುತ್ತಿಗೆಯ ಕೆಳಗಿರುವ ದೇಹದ ಎಲ್ಲ ಭಾಗಗಳಿಂದ ಸಂವೇದನೆಯು ಮೆದುಳಬಳ್ಳಿಯ ಮುಖಾಂತರ ಮೆದುಳಿಗೂ ಮತ್ತು ಮೆದುಳಿನಿಂದ ಆಜ್ಞೆಗಳು ದೇಹದ ಅಂಗಳಿಗೂ ರವಾನೆಯಾಗುತ್ತದೆ.

ದೇಹಕ್ಕೆ ವಯಸ್ಸಾದಂತೆ ಹಾಗೂ ನಮ್ಮ ವೃತ್ತಿ ಮತ್ತು ದೇಹದ ನಿಲುವನ್ನು ಹೊಂದಿಕೊಂಡು ಕಶೇರುಕಮಣಿಗಳು ಒಂದಕ್ಕೊಂದು ತಾಗಿಕೊಂಡು ಇರುವ ಸ್ಥಳದಲ್ಲಿ ಸವೆಯುತ್ತದೆ. ಅಷ್ಟು ಮಾತ್ರವಲ್ಲದೆ ಸವೆದ ಜಾಗದ ಸುತ್ತ ಎಲುಬಿನ ತುಣುಕುಗಳು (osteophytes) ಹೊಸದಾಗಿ ವಕ್ರ ವಕ್ರವಾಗಿ ಬೆಳೆಯುತ್ತವೆ. ಈ ಖಾಯಿಲೆಯನ್ನು ಸ್ಪೊಂಡಿಲೋಸಿಸ್ ಎಂದು ಕರೆಯುತ್ತೇವೆ. ಈ ತೊಂದರೆಯಿರುವ ಬೆನ್ನೆಲುಬು ಸಲೀಸಾಗಿ ಬಾಗುವುದಿಲ್ಲ ಹಾಗೂ ಇಂತಹಾ ಬೆನ್ನೆಲುಬು ಬಾಗುವಾಗ ನೋವಾಗುತ್ತದೆ. ಕೆಲವೊಮ್ಮೆ ಈ ಸವೆದ ಎಲುಬುಗಳು ಮತ್ತು ಹೊಸತಾಗಿ ಬೆಳೆದ ಎಲುಬಿನ ತುಣುಕಗಳು ಎರಡು ಕಶೇರುಕಮಣಿಗಳ ಮಧ್ಯದಿಂದ ಹೊರಬರುತ್ತಿರುವ ನರಕ್ಕೆ ಚುಚ್ಚಿದರೆ ಆ ನರದ ವ್ಯಾಪ್ತಿಯಲ್ಲಿ ಬರುವ ದೇಹದ ಭಾಗದಲ್ಲಿ ಇರುವೆ ಹರಿದಾಡಿದಂತೆ, ಜೋಮುಹಿಡಿದಂತೆ, ಅಥವಾ ನೋವಿನ ಅನುಭವ ಉಂಟಾಗಬಹುದು. ಈ ಕಾರಣದಿಂದಾಗಿ ಒಂದು ವೇಳೆ ಮಾಂಸಖಂಡಗಳಿಗೆ ಮೆದುಳಿನಿಂದ ಬರಬೇಕಾದ ಆಜ್ಞೆಗಳಿಗೆ ತಡೆಯುಂಟಾದರೆ ಬಲಹೀನತೆ ಉಂಟಾಗಬಹುದು.

ಸ್ಪೊಂಡಿಲೋಸಿಸ್ ಖಾಯಿಲೆಯು ಬೆನ್ನೆಲುಬಿನ ಯಾವ ಭಾಗದಲ್ಲೂ ಕಾಣಿಸಬಹುದು. ಆಗ ಕಾಯಿಲೆಯ ಚಿಹ್ನೆಗಳಾದ ನೋವು, ಜೋಮು ಮತ್ತು ಬಲಹೀನತೆಗಳು ಖಾಯಿಲೆ ಇರುವ ಬೆನ್ನೆಲುಬಿನ ಭಾಗಕ್ಕಿಂತ ಕೆಳಗೆ ಇರುತ್ತದೆ. ಉದಾ ಕುತ್ತಿಗೆಯಲ್ಲಿ ಸ್ಪೊಂಡಿಲೋಸಿಸ್ ಇದ್ದಾಗ ಕೈ ಮತ್ತು ಭುಜಗಳಲ್ಲೂ, ಸೊಂಟದ ಎಲುಬಿನ ಖಾಯಿಲೆಗಳಲ್ಲಿ ಚಿಹ್ನೆಗಳು ಕಾಲುಗಳಲ್ಲೂ ಇರುತ್ತವೆ. ಖಾಯಿಲೆಯ ಚಿಹ್ನೆಗಳು ದಿನವಿಡೀ ಇರದೆ ಯಾವುದಾದರೊಂದು ನಿಲುವಿನಲ್ಲಿ (ಉದಾ : ಮಲಗಿರುವ ನಿಲುವಿನಲ್ಲಿ ಅಥವಾ ಬಗ್ಗಿ ಕುಳಿತ ನಿಲುವಿನಲ್ಲಿ) ಅಥವಾ ಕೆಲಸದ ಸಮಯದಲ್ಲಿ ಮಾತ್ರ ಕಾಣುತ್ತದೆ. ಸ್ಪೊಂಡಿಲೋಸಿಸ್ ತೊಂದರೆ ಇರುವುದನ್ನು x-ray ಮತ್ತು ಎಮ್.ಆರ್.ಐ. ಎಂಬ ಸ್ಕ್ಯಾನ್ ಮುಖಾಂತರ ಖಚಿತಪಡಿಸಿಕೊಳ್ಳಬಹುದು.

ಸ್ಪೊಂಡಿಲೋಸಿಸ್ ಕಾಯಿಲೆಯಲ್ಲಿ ರೋಗಿಯ ಚಿಹ್ನೆಗಳಿಗೆ ಕಾರಣವಾದ ಎಲುಬಿನ ಸವೆತವನ್ನಾಗಲಿ, ಹೊಸತಾಗಿ ಬೆಳೆದ ಎಲುಬಿನ ತುಣುಕುಗಳನ್ನಾಗಲಿ ಔಷಧಗಳಿಂದ ಸರಿಪಡಿಸಲು ಸಾಧ್ಯವಿಲ್ಲ. ದೇಹವು ಯಾವ ನಿಲುವಿನಲ್ಲಿರುವಾಗ, ಯಾವ ಕೆಲಸ ಮಾಡುವಾಗ ಖಾಯಿಲೆಯ ಚಿಹ್ನೆಗಳು ಕಾಣಿಸುತ್ತವೆಂಬುದನ್ನು ರೋಗಿಯು ಸೂಕ್ಷ್ಮವಾಗಿ ಗಮನಿಸಿಕೊಂಡಿದ್ದು ಅದರಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವುದು ಅತ್ಯುತ್ತಮ ಉಪಾಯ. ಉದಾಹರಣೆಗೆ ವಾಹನ ಚಲಾಯಿಸುವುದರಿಂದ ಈ ಚಿಹ್ನೆಗಳು ಹೆಚ್ಚಾಗುವುದಾದರೆ ಸೀಟಿನ ಎತ್ತರವನ್ನು ಹೆಚ್ಚು ಅಥವಾ ಕಡಿಮೆ ಮಾಡುವುದರಿಂದ ಚಿಹ್ನೆಗಳ ತೀವ್ರತೆ ಕಡಿಮೆಯಾಗುವುದು. ನೋವು ನಿವಾರಕಗಳು, ಕ್ಯಾಲ್ಸಿಯಂನ ಗುಳಿಗೆಗಳಿಂದ ತಾತ್ಕಾಲಿಕ ಉಪಶಮನ ಸಿಗುತ್ತದೆ. ನೋವು ನಿವಾರಕ ಮುಲಾಮುಗಳು, ಎಣ್ಣೆಗಳು ಮತ್ತು ಬಿಸಿನೀರಿನ ಶಾಖ ಕೊಡುವುದರಿಂದಲೂ ತಾತ್ಕಾಲಿಕ ಉಪಶಮನ ಸಿಗುತ್ತದೆ.

ಕಾಯಿಲೆಯ ಚಿಹ್ನೆಗಳು ತುಂಬಾ ತೀವ್ರ ಮಟ್ಟದ್ದಾಗಿದ್ದರೆ, ಉದಾಹರಣೆಗೆ ತೀವ್ರವಾದ ನೋವು, ಕೈಕಾಲುಗಳಲ್ಲಿ ಬಲಹೀನತೆ, ಮಲಮೂತ್ರ ವಿಸರ್ಜನೆಗೆ ತೊಂದರೆಯಾಗುವುದು, ಅಥವಾ ಹೊಸದಾಗಿ ಬೆಳೆದ ಎಲುಬಿನ ತುಣುಕುಗಳು ಮೆದುಳಬಳ್ಳಿಯ ಮೇಲೆ ಚುಚ್ಚುತ್ತಿರುವ ಚಿಹ್ನೆಗಳಿದ್ದರೆ ಅಪರೂಪದಲ್ಲಿ ಶಸ್ತ್ರಚಿಕಿತ್ಸೆಯ ಅಗತ್ಯ ಬೀಳಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

# ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

ಅಂಚೆ : ಕೋಡಿಂಬಾಡಿ - 574 287, ಪುತ್ತೂರು ತಾಲೂಕು, ದ.ಕ.

ಪ್ರಿಯ ಭಗವದ್ಭಕ್ತರೇ,

ನಮ್ಮ ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ

## ನವರಾತ್ರಿ ಉತ್ಸವವು

ಇದೇ ಬರುವ ತಾ.28-09-2011ನೇ ಬುಧವಾರದಿಂದ ತಾ.06-10-2011ನೇ ಗುರುವಾರದ ತನಕ ಹಾಗೂ ತಾ.02-10-2011ನೇ ಭಾನುವಾರ ಶ್ರೀ ಕ್ಷೇತ್ರದಲ್ಲಿ

## ಶ್ರೀ ಚಂಡಿಕಾಹೋಮ

ನಡೆಯಲಿರುವುದರಿಂದ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ

**ಯಂ.ನಾಗೇಶ ಶರ್ಮ** **ಆಡಳಿತ ಮಂಡಳಿ.**

**ಅರ್ಚಕರು, ಆಡಳಿತ ಮೊಕ್ತೇಸರ, ಮೊಬೈಲ್ : 9901247080**

**ವಿಶೇಷ ಸೇವೆ**

| | | | |
|---|---|---|---|
| ಅನ್ನಸಂತರ್ಪಣೆ | 501/- | ಶ್ರೀ ಚಂಡಿಕಾಹೋಮ | 501/- |
| ರಂಗಪೂಜೆ | 301/- | ನವರಾತ್ರಿ ಪೂಜೆ | 201/- |

ಸಮಾಜ ಬಾಂಧವರು ಶ್ರೀ ಚಂಡಿಕಾಹೋಮ ಮಾಡಿಸುವವರು ಮುಂದಾಗಿ ತಿಳಿಸಬೇಕಾಗಿ ವಿನಂತಿ.

**ಯಂ.ನಾಗೇಶ ಶರ್ಮ**

# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಬುಧವಾರ : **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.15-10-2011) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.08-10-2011 "ಗಮಕವಾಚನ" ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.02-10-2011 ಆಶ್ವಿಜ ಶುದ್ಧ ಷಷ್ಠಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.03-10-2011 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು , ಉಡುಪಿ.

## ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2011-2012ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2011ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

# ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು , ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.60,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2011ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊಬಲಗನ್ನು ಹಿಂದಿನ ವರ್ಷದಂತೆಯೇ ಎಂ.ಓ. ಮೂಲಕ ಕಳುಹಿಸಲಾಗುವುದು.

- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 101.

# ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ, ಮುಲ್ಲಡ್ಕ, ಅಂಚೆ : ಮುಂಡ್ಕೂರು - 576 121, ಕಾರ್ಕಳ ತಾಲೂಕು.

ಭಕ್ತ ಮಹಾಜನರೇ,

ಸ್ವಸ್ತಿ। ಶ್ರೀ ಶಾಲಿವಾಹನ ವರ್ಷ 1934ನೇ ಖರ ನಾಮ ಸಂವತ್ಸರದ ಅಶ್ವಯುಜ ಪಾಡ್ಯದಿಂದ ನವಮಿ ಪರ್ಯಂತ ದಿನಾಂಕ 28-09-2011ರಿಂದ ದಿನಾಂಕ 05-10-2011ರ ವರೆಗೆ ವರ್ಷಂಪ್ರತಿ

**ನವರಾತ್ರಿ ಮಹೋತ್ಸವವು** ಜರಗಲಿರುವುದು.

ತಾವೆಲ್ಲರೂ ಬಂದು ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ, ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಅನ್ನಪೂರ್ಣೇಶ್ವರೀ ದೇವರ ವಿಶೇಷ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

**- ಆಡಳಿತ ಮೊಕ್ತೇಸರರು**

**ವಿ.ಸೂ. : ಭಕ್ತರು ಅಕ್ಕಿ, ತೆಂಗಿನಕಾಯಿ, ತುಪ್ಪ, ಎಣ್ಣೆ, ಬೆಲ್ಲ ಅಥವಾ ಹಸಿರುವಾಣಿ ಹೊರೆಗಳನ್ನು** ನೀಡಬೇಕಾಗಿ ವಿನಂತಿಸುತ್ತೇನೆ.

ದೇವಸ್ಥಾನದ ಪೂರ್ವದಿಕ್ಕಿನ ಹೊರಾಂಗಣಕ್ಕೆ ಕಲ್ಲು ಹಾಸುವ ಬಗ್ಗೆ ಸಂಕಲ್ಪಿಸಿರುತ್ತೇವೆ. (ಒಟ್ಟು ಅಂದಾಜು ವೆಚ್ಚ ರೂ.1,50,000/-) ಒಂದು ಚದರ ಅಡಿಗೆ ರೂ.35 ರಂತೆ ನೀಡಿ ಈ ಪುಣ್ಯ ಕಾರ್ಯದಲ್ಲಿ ಭಕ್ತರು ಸಹಕರಿಸಬೇಕಾಗಿ ವಿನಂತಿಸುತ್ತೇವೆ.
ದೇವಸ್ಥಾನದ ಹಿಂಭಾಗದಲ್ಲಿ ಭಕ್ತರ ಸಹಕಾರದಿಂದ ಅಡುಗೆಕೋಣೆ, ಸಭಾವೇದಿಕೆ ಹಾಗೂ ಊಟದ ಛತ್ರದ ಕೆಲಸವನ್ನು ಆರಂಭಿಸಿದ್ದೇವೆ. ಭಕ್ತರು ಸಹಕರಿಸಬೇಕಾಗಿ ವಿನಂತಿ. (ರೂ.10,000/- ಹಾಗೂ ಮೇಲ್ಪಟ್ಟು ಧನಸಹಾಯ ನೀಡುವವರ ಹೆಸರನ್ನು ಶಾಶ್ವತವಾಗಿ ಕಲ್ಲಿನ ಫಲಕದಲ್ಲಿ ಕೆತ್ತಿಸಲಾಗುವುದು)
ಧನ ಸಹಾಯ ನೀಡುವವರು Syndicate Bank, Mundkur, S.B.A/c No.01462200004068 (IFSC No.SYNB 0000146) ಇದಕ್ಕೆ ಕಳುಹಿಸಬೇಕಾಗಿ ವಿನಂತಿ.







RAJESH POWER PRESS

PRINTERS & PUBLISHERS

DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com

QUALITY FIRST AND ALWAYS


Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Gurushree Building, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org